ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 | ಸಂಚಿಕೆ 16 | ಜುಲೈ 1, 1979 | 40 ಪೈಸೆ

ಮುಂದಿನ ದಾರಿ ?

ಚಿಕ್ಕಮಗಳೂರು ಲೋಕಸಭಾ ಉಪಚುನಾವಣೆಯ ಬಗ್ಗೆ ವಿಮರ್ಶೆ ಮಾಡುತ್ತಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಂ. ಇ. ಎಮ್. ಎಸ್. ನಂಬೂದಿರಿಪ್ಪಾದರು ಪೀಪಲ್ಸ್ ಡೆಮೋಕ್ರಸಿಯಲ್ಲಿ ಹೀಗೆ ಬರೆದಿದ್ದರು : "ಚಿಕ್ಕಮಗಳೂರು ಚುನಾವಣೆಯ ನಂತರ ಕರ್ನಾಟಕವು ಈಗಿದ್ದಂತೆ ಇರುವುದಿಲ್ಲ". ಕಾಂ. ಇ. ಎಮ್. ಎಸ್. ರವರು ಆಗ ತಾನೆ ಬೆಳಕಿಗೆ ಬರಲು ಪ್ರಾರಂಭವಾದ ಇಂದಿರಾಗಾಂಧಿ ಮತ್ತು ದೇವರಾಜ ಅರಸು ಅವರ ವಿರಸ ಮತ್ತು ರಾಜಕೀಯ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಹೇಳಿದ ಭವಿಷ್ಯವು ಸತ್ಯವಾಗಿದೆ.

ಉತ್ತರ ಭಾರತದಲ್ಲಿ ಸೋತರೂ, ದಕ್ಷಿಣ ಭಾರತದಲ್ಲಿ ಜನಬೆಂಬಲವಿದೆ ಮತ್ತು ತನಗೆ ಬಲವಾದ ನೆಲಗಳಿವೆ ಎಂದು ಜಂಭ ಕೊಚ್ಚಿಕೊಳ್ಳುತ್ತಿದ್ದ ಇಂದಿರಾಗಾಂಧಿ ಮತ್ತು ಅವರ ಬಂಟರುಗಳಿಗೆ ಕರ್ನಾಟಕದ ಬೆಳವಣಿಗೆಯಿಂದ (ತೋರ್ಪಿಕೆಗೆ ಏನೇ ಹೇಳಿಕೆ ಇತ್ತರೂ) ಬಹಳ ಆಘಾತವಾಗಿದೆ. ತುರ್ತುಪರಿಸ್ಥಿತಿ ಇದ್ದು ಲೋಕಸಭಾ ಚುನಾವಣೆಯನ್ನು ಘೋಷಿಸಿದ ಸಂದರ್ಭದಲ್ಲಿ ಜಗಜ್ಜೀವನ ರಾಮ್ ಅವರು ಇಂದಿರಾ ಕಾಂಗ್ರೆಸ್ಸನ್ನು ತ್ಯಜಿಸಿ, ಇಂದಿರಾ ಕಾಂಗ್ರೆಸ್ಸಿಗೆ ಉತ್ತರ ಭಾಗದಲ್ಲಿ ಒದೆತ ಕೊಟ್ಟಂತೆಯೇ ದೇವರಾಜ ಅರಸು

ಸಂಪಾದಕೀಯ

ಅವರ ಕ್ರಮದಿಂದ ಇಂದಿರಾಗಾಂಧಿ ಮತ್ತವರ ದುಷ್ಟಕೂಟಕ್ಕೆ ದಕ್ಷಿಣ ಭಾರತದಲ್ಲೂ ತೀವ್ರವಾದ ಒದೆತ ಬಿದ್ದಂತಾಗಿದೆ. ಮಹಾರಾಷ್ಟ್ರದಲ್ಲಾದ ಮೇಲೆ ಕರ್ನಾಟಕ; ಕರ್ನಾಟಕದ ಬೆಳವಣಿಗೆಯ ಪರಿಣಾಮ ಆಂಧ್ರದಲ್ಲೂ ಆಗಲಿದೆ. ಅರಸು ಅವರಿಗೆ ಬೆಂಬಲಾರ್ಥವಾಗಿ ಕಾಂಗ್ರೆಸ್ (ಐ) ಯ ಅನೇಕ ಮುಖಂಡರುಗಳ ಮತ್ತು ಸ್ವರಣ್‌ಸಿಂಗ್ ಕಾಂಗ್ರೆಸ್ ಮುಖಂಡರುಗಳ ಹೇಳಿಕೆಗಳು ಬಂದಿವೆ.

— ಒಂದೆಡೆ ಕಾಂಗ್ರೆಸ್ ಪಕ್ಷದ ಮೂವತ್ತು ವರ್ಷಗಳ ಆಳ್ವಿಕೆಯಿಂದ ಜನ ಬೇಸತ್ತಿದ್ದರೆ, ಇನ್ನೊಂದೆಡೆ ಜನತಾಪಕ್ಷದ ಮೇಲಿಟ್ಟ ಭರವಸೆಗಳೆಲ್ಲಾ ಮಾಯವಾಗುತ್ತಲಿದೆ. ಜನತೆಯು ಮುಂದಿನ ದಾರಿ ಬಗ್ಗೆ ಗೊಂದಲದಲ್ಲಿದೆ. ಒಂದೆಡೆ ಇಂದಿರಾಗಾಂಧಿಯಂತಹ ಸರ್ವಾಧಿಕಾರಿಯು ಅಧಿಕಾರ ಪಡೆಯಲು ಹವಣಿಸಿದರೆ, ಇನ್ನೊಂದೆಡೆ ಕೋಮು ಶಕ್ತಿಗಳು ಅಧಿಕಾರ ಯಂತ್ರವನ್ನು ಉಪಯೋಗಿಸಿ ಬೆಳೆಯುತ್ತಲಿವೆ. ಜನತಾ ಪಕ್ಷವು ಇಂದು ಒಂದೇ ಪಕ್ಷದಂತಿರದೆ, ಒಳಜಗಳಗಳಿಂದ ಸಿಡಿದುಹೋಗುವ ಸ್ಥಿತಿಯಲ್ಲಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಇಂದಿರಾಗಾಂಧಿಗೆ ದೊರೆತ ಒದೆತದ ಪರಿಣಾಮವಾಗಿ ರಾಷ್ಟ್ರಾದ್ಯಂತ ಸರ್ವಾಧಿಕಾರ ಮತ್ತು ಕೋಮು ಶಕ್ತಿಗಳಿಗೆ ವಿರೋಧವಾಗಿರುವ ಒಂದು ಶಕ್ತಿಯು ಬೆಳೆದು ಬರಲು ಅನುಕೂಲ ವಾತಾವರಣವಿದೆ, ಸಾಧ್ಯತೆಯೂ ಇದೆ. ಈ ರೀತಿಯ ಶಕ್ತಿಯು ಬೆಳೆದು ಬರುವುದಕ್ಕೆ ಎಡ ಪಕ್ಷಗಳ ಬೆಂಬಲ ದೊರೆತೇದೊರೆಯುವುದು.

[ಕಡೆಯ ಪುಟ ನೋಡಿ]

ಕೇಂದ್ರ ಮೀಸಲು ಪೋಲೀಸರ ಮುಷ್ಕರ

ಪೋಲಿಟ್ ಬ್ಯೂರೊ ಹೇಳಿಕೆ

ರಾಷ್ಟ್ರದಾದ್ಯಂತ ಪೋಲೀಸರ ಚಳುವಳಿಯು ನಡೆದಿದ್ದಾಗ್ಯೂ ಕೇಂದ್ರ ಸರಕಾರವು ಕೇಂದ್ರ ಮೀಸಲು ಪೋಲೀಸ್ (ಸಿ. ಆರ್. ಪಿ.) ಪಡೆಯ ಸಿಬ್ಬಂದಿಗಳ ಬಗ್ಗೆ ತೋರಿದ ನಿರ್ದಯ ಮನೋಭಾವನೆಯ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೋಲಿಟ್‌ಬ್ಯೂರೊ ಆಶ್ಚರ್ಯ ಪಡುತ್ತದೆ. ಪೋಲೀಸರ ಹೋರಾಟಕ್ಕೆ ಸಾರ್ವಜನಿಕರಿಂದ ಸಾರ್ವತ್ರಿಕ ಬೆಂಬಲ ದೊರೆತದ್ದರ ಪರಿಣಾಮವಾಗಿ ಬೇರೆ ಬೇರೆ ರಾಜ್ಯ ಸರಕಾರಗಳು ಮತ್ತು ಕೇಂದ್ರ ಸರ್ಕಾರವೂ ಸೇರಿ ಪೋಲೀಸರಿಗೆ ಹಲವು ರಿಯಾಯಿತಿ ಮತ್ತು ಸವಲತ್ತುಗಳನ್ನು ಕೊಡುವುದಾಗಿ ಹೇಳಿರುವುವು. ಆದರೆ ಕೇಂದ್ರ ಸರಕಾರವು ಈ ಅನುಭವದಿಂದ ಏನೂ ಪಾಠ ಕಲಿಯದೆ, ಕೇಂದ್ರ ಮೀಸಲು ಪೋಲೀಸರ ನ್ಯಾಯವಾದ ಬೇಡಿಕೆಗಳ ಬಗ್ಗೆ ಗಮನ ಹರಿಸಿ, ಪರಿಹಾರಕ್ಕೆ ಬೇಕಾದ ಕ್ರಮಗಳನ್ನು ತೆಗೆದುಕೊಂಡು, ಒರಿಸ್ಸಾದಲ್ಲಿ, ತಿರುವನಂತಪುರದಲ್ಲಿ ಮತ್ತು ಇದೀಗ ದೆಹಲಿಯಲ್ಲಿನ ಮುಷ್ಕರಗಳನ್ನು ತಪ್ಪಿಸುವುದರಲ್ಲಿ ವಿಫಲವಾಗಿದೆ.

ಬೇರೆ ಬೇರೆ ರಾಜ್ಯಗಳಲ್ಲಿ ಪೋಲೀಸರುಗಳು ಮಾಡಿದಂತೆ, ಕೇಂದ್ರ ಮೀಸಲು ಪೋಲೀಸ್ ಪಡೆಯ ಸಿಬ್ಬಂದಿಗಳೂ ಸರಳವಾದ ಮತ್ತು ಇನ್ನು ತಡೆಯಲು ಸಾಧ್ಯವಿಲ್ಲದ ಬೇಡಿಕೆಗಳನ್ನು ಮುಂದಿಟ್ಟಿರುವರು. ವೇತನದಲ್ಲಿ ಹೆಚ್ಚುವರಿ, ಕೆಲಸದ ಸಮಯದಲ್ಲಿ ಕಡಿತ, ವಾರದ ರಜಾದಿನ, ಮೊದಲಾದ ನ್ಯಾಯಯುತವಾದ ಬೇಡಿಕೆಗಳಷ್ಟೆ ಅಲ್ಲದೆ ಮೇಲಧಿಕಾರಿಗಳಿಗೆ ಕೊಟ್ಟಿರುವ ನ್ಯಾಯಸ್ಥಾನಕ್ಕೆ ತಕ್ಕ ಅಧಿಕಾರ (Judicial Powers) ವನ್ನು ಹಿಂತೆಗೆದುಕೊಳ್ಳಬೇಕು; ಮೇಲಧಿಕಾರಿಗಳಿಗೆ ಸೇವಕನಂತೆ (Orderly) ನಡೆಯಬೇಕಾದ ಪದ್ಧತಿಯ ಕಾನೂನಿನ ಪ್ರಕಾರ ಕಿತ್ತುಹಾಕಿದ್ದೇವೆ ಎಂದು ಸಾರಿದರೂ, ಪ್ರಾಯೋಗಿಕವಾಗಿ ಇನ್ನೂ ಇದು ಜಾರಿಯಲ್ಲಿರುವುದನ್ನು ತಕ್ಷಣದಿಂದಲೇ ನಿಲ್ಲಿಸಬೇಕು; ಸಂಘಟನೆಯನ್ನು ಮಾಡುವ ಸ್ವಾತಂತ್ರ್ಯವನ್ನು ಕೊಡಬೇಕು; ರಾಷ್ಟ್ರೀಯ ಪೋಲೀಸ್ ಕಮಿಷನ್ ಮಾಡಿದ ಶಿಫಾರಸುಗಳನ್ನು ಜಾರಿಗೊಳಿಸಬೇಕು.

ಈ ನ್ಯಾಯಯುತವಾದ ಬೇಡಿಕೆಗಳನ್ನು ತಕ್ಷಣವೇ ಈಡೇರಿಸಿಕೊಟ್ಟು, ಕೇಂದ್ರ ಮೀಸಲು ಪೋಲೀಸರ ಚಳುವಳಿಯನ್ನು ಹಿಂತೆಗೆದುಕೊಳ್ಳಲು ಮಾರ್ಗ ಮಾಡಿಕೊಡುವುದಕ್ಕೆ ಬದಲು, ಸರಕಾರವು ಕೇಂದ್ರ ಮೀಸಲು ಪೋಲೀಸರ ಮುಷ್ಕರವನ್ನು ಹತ್ತಿಕ್ಕಲು ಸೈನಿಕ ದಳಗಳನ್ನು ಉಪಯೋಗಿಸುವುದರ ಬಗ್ಗೆ ಪೋಲಿಟ್‌ಬ್ಯೂರೋವು ತನ್ನ ಅಸಮಾಧಾನವನ್ನು ವ್ಯಕ್ತಪಡಿಸುತ್ತದೆ. ಸರಕಾರವು ತನ್ನ ಈ ನೀತಿಯನ್ನು ತಕ್ಷಣವೇ ಕೈಬಿಟ್ಟು, ಕೇಂದ್ರ ಮೀಸಲು ದಳದ ಸಿಬ್ಬಂದಿಗಳೊಂದಿಗೆ ಸೌಹಾರ್ದ ಮತ್ತು ನ್ಯಾಯಯುತವಾಗಿ ವರ್ತಿಸಿ ಸಮಸ್ಯೆಯನ್ನು ಪರಿಹರಿಸಬೇಕೆಂದು ಕೇಳಿಕೊಳ್ಳುತ್ತದೆ.

ತ್ರಿಪುರಾದಲ್ಲಿ ತಡೆಯಿಲ್ಲದ ಪ್ರತಿಗಾಮಿ ಚಟುವಟಿಕೆ

ರಮೇಶ್ ದಾಸ್

ಆನಂದಮಾರ್ಗದ ನೇತೃತ್ವದಲ್ಲಿರುವ ಮತಾಂಧ ಅಮ್ರಬಂಗಾಲಿ ಸಂಘವು ತ್ರಿಪುರಾದಲ್ಲಿ ಮತ್ತೆ ರಕ್ತ ಹರಿಸಿದೆ. ಅವರಿಂದ ಪ್ರೇರೇಪಿತವಾದ ಕಲಹಗಳಲ್ಲಿ ಹದಿನಾರು ಜೀವಗಳು ಬಲಿಯಾಗಿವೆ.

ಪೂರ್ವ ಪಾಕಿಸ್ತಾನ ಮತ್ತು ಈಗ ಬಾಂಗ್ಲಾ ದೇಶಗಳಿಂದ ಬಂಗಾಲಿ ನಿರಾಶ್ರಿತರು ವಿಪರೀತ ಸಂಖ್ಯೆಯಲ್ಲಿ ತ್ರಿಪುರಾಕ್ಕೆ ಬಂದಿರುವುದರಿಂದ, ಸ್ವಾತಂತ್ರ್ಯ ಪೂರ್ವ ದಿನಗಳಲ್ಲಿ ಬಹುಸಂಖ್ಯಾತರಾಗಿದ್ದ ಬುಡಕಟ್ಟು ಜನರು ಈಗ ಅಲ್ಪಸಂಖ್ಯಾತರಾಗಿದ್ದಾರೆ. ಅವರ ಹಿತಾಸಕ್ತಿಗಳ ರಕ್ಷಣೆಗಾಗಿ ತ್ರಿಪುರಾದ ಎಡರಂಗ ಸರ್ಕಾರವು ವಿಧಾನಸಭೆಯ ಮೂಲಕ ಸ್ವಾಯತ್ತ ಜಿಲ್ಲಾ ಸಮಿತಿ ಮಸೂದೆಯನ್ನು ಜಾರಿಗೆ ತಂದಿದೆ. ಇದರ ವಿರುದ್ಧ ಅಮ್ರಬಂಗಾಲಿಗಳು ಉಗ್ರವಾದ ಹೋರಾಟ ನಡೆಸಿದ್ದಾರೆ.

ರಾಜ್ಯದಲ್ಲಿ ಈಗ ಬೆಲೆಕಳೆದುಕೊಂಡಿರುವ ಮತ್ತು ಕೇವಲ ತಮ್ಮ ಅಸ್ತಿತ್ವಕ್ಕಾಗಿ ವಿವಿಧ ಕಾಂಗ್ರೆಸ್‌ಗಳು ಮತ್ತು ಜನತಾ ಪಕ್ಷದ ಸಂಬಂಧ ಹೊಂದಿರುವ ರಾಜಕೀಯ ಅಂಶಗಳು, ಈ ಮತಾಂಧ ವಿನಾಶಗಳಿಗೆ, ಇವರ ಭೀಕರ ರಾಜಕೀಯಕ್ಕೆ ಎಲ್ಲತರದ ಬೆಂಬಲ ನೀಡುತ್ತಿದ್ದಾರೆ. ತೆಲಿಯಮುರಾದಲ್ಲಿ ನಡೆದ ಇತ್ತೀಚಿನ ಘಟನೆಗಳಲ್ಲಿ, ಈ ರಾಜಕೀಯ ಅಂಶಗಳು ಅಮ್ರಬಂಗಾಲಿಗಳಿಗೆ ಸ್ಥಳದಲ್ಲೇ ನಿರ್ದೇಶನ ನೀಡುತ್ತಿದ್ದುದು ಕಂಡುಬಂದಾಗ, ಇವರೆಲ್ಲರಿಗಿರುವ ಹತ್ತಿರದ ಸಂಬಂಧ ಬಹಿರಂಗವಾಯಿತು.

ಅಮ್ರಬಂಗಾಲಿ ಮತ್ತು ಅವರ ರಾಜಕೀಯ ಪೋಷಕರು ಬುಡಕಟ್ಟಿಗೆ ಸೇರದ ಜನರ ಮನಸ್ಸಿನಲ್ಲಿ ಊರಿರುವ ಮತಾಂಧ ಪ್ರಚಾರದಿಂದುಂಟಾದ ಭಯಗಳನ್ನು ಹೋಗಲಾಡಿಸಲು ವಾಮರಂಗವು, ಜೂನ್ 9 ರಂದು, ಅಗರ್ತಾಲದಿಂದ 50 ಕಿ.ಮೀ. ದೂರದಲ್ಲಿರುವ ತೆಲಿಯಮುರಾದಲ್ಲಿ ಸಭೆ ಕರೆದಿತ್ತು.

ಈ ಸಭೆ ನಡೆಯದಂತೆ ಮಾಡಬೇಕೆಂದು ಅಮ್ರಬಂಗಾಲಿಗಳು ನಿಶ್ಚಯಿಸಿದ್ದರು. ಜೂನ್ 7 ರಂದು ಅವರು ತೆಲಿಯಮುರಾದಲ್ಲಿ ಒಂದು ಸಭೆ ನಡೆಸಿ, ವಾಮರಂಗದ ಸಭೆಯನ್ನು ನಿಲ್ಲಿಸಲು ಎಲ್ಲತರದ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಅವರ ಅನುಯಾಯಿಗಳಿಗೆ ಕರೆನೀಡಿದರು. ಖೋವೈ, ಕುಲೈ, ಅಂಬಸ್ಸ, ಮಹಾಚೆರ್ರ, ತೆಲಿಯಮುರಾ ಮುಂತಾದ ಕಡೆಗಳಲ್ಲಿ ಜೂನ್ 9 ರಂದು ಬಂದ್ ಆಚರಿಸುವಂತೆ ಕೂಡ ಹೇಳಲಾಗಿತ್ತು.

ವಾಮರಂಗದ ಸಭೆಯ ದಿನವಾದ ಜೂನ್ 9 ರಂದು ಐದುಜನ ವಾಮರಂಗ ಸಚಿವರು ಸಭೆಯಲ್ಲಿ ಮಾತನಾಡಲಿದ್ದರು. ಆ ದಿನ, ವಾಮರಂಗದ ಮೆರವಣಿಗೆಗಳು ಹಾದು ಬರಬೇಕಾಗಿದ್ದ ಖೋವೈ-ತೆಲಿಯಮುರಾ ರಸ್ತೆಯ ಎರಡೂ ಪಕ್ಕಗಳಲ್ಲಿ ಅಮ್ರಬಂಗಾಲಿಗಳು ಮತ್ತು ಅವರ ಬಾಡಿಗೆ ಗೂಂಡಾಗಳು ನಿಂತಿದ್ದರು. ಕೊಡಲಿ, ಕತ್ತಿ, ಬಾಣ, ಬಿಲ್ಲು ಮುಂತಾದ ಉಗ್ರ ಆಯುಧಗಳನ್ನು ಅವರು ತಂದಿದ್ದರು. ರಸ್ತೆ ತಡೆಗಳನ್ನು ಉಂಟುಮಾಡಲು ರಸ್ತೆಯ ಪಕ್ಕದ ದೊಡ್ಡ ಮರಗಳನ್ನು ಕಡಿದು ಉರುಳಿಸಿದ್ದರು. ಒಂದು ಸೇತುವೆಯನ್ನು ಕೂಡಾ ಅವರು ನಾಶಮಾಡಿದರು. ಹೀಗೆ ಇಂಥ ಸಿದ್ಧತೆಗಳ ಮೂಲಕ ಆ ರಸ್ತೆಯನ್ನು ಹಾದು ಹೋಗುವ ಪ್ರತಿ ಮೆರವಣಿಗೆಯ ಮೇಲೂ ಅವರು ಆಕ್ರಮಣ ನಡೆಸಿದರು. ಮಧ್ಯೆ ಪ್ರವೇಶಿಸಿದ ಅನೇಕ ವಾಮರಂಗದ ಬೆಂಬಲಿಗರು ಮತ್ತು ಕೆಲವು ಪೋಲೀಸರು ಗಾಯಗೊಂಡರು.

ಮಹಾಚೆರ್ರದಲ್ಲಿ ವಾಮರಂಗ ಬೆಂಬಲಿಗರು ಮತ್ತು ಅಮ್ರಬಂಗಾಲಿಗಳ ನಡುವೆ ಒಂದು ಕದನ ನಡೆಯಿತು. ಐದು ಜನ ಜೀವ ತೆತ್ತರು. ಗೂಂಡಾಗಳು ಒಂದು ಪೋಲೀಸ್ ಪಡೆಯ ಮೇಲೆ ಆಕ್ರಮಣ ಮಾಡಿದರು. ಬೇಸತ್ತ ಪೋಲೀಸರು ಗೋಲಿಬಾರ್ ಮಾಡಿದಾಗ ಮತ್ತೆ ಮೂರು ಜನ ಸತ್ತರು. ಕುಲೈನಲ್ಲಿ ನಡೆದ ಇನ್ನೊಂದು ಕಲಹದಲ್ಲಿ ಮೂರು ಜನ ಮಡಿದರು.

(ಕಡೆಯ ಪುಟ ನೋಡಿ)

ಹಳ್ಳಿಯ ಬಡರೈತವರ್ಗದ ಪರಿಸ್ಥಿತಿ

—ಎನ್. ಜಿ. ಮ್ಹಾಳಸೇಕರ್

ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಕೃಷಿರಂಗದಲ್ಲಿ ರೈತವರ್ಗವು ಇನ್ನೂ ಜಮೀನ್ದಾರ ವರ್ಗದ ಹಲವು ರೀತಿಯ ಶೋಷಣೆ, ದಬ್ಬಾಳಿಕೆ, ಅನ್ಯಾಯದ ಸರಪಳಿಗಳಲ್ಲಿ ಸಿಲುಕಿಕೊಂಡಿದೆ. ಇಂಥ ಅನ್ಯಾಯ, ದಬ್ಬಾಳಿಕೆ, ಶೋಷಣೆಯನ್ನು ಸಹಿಸಲು ಅಸಾಧ್ಯವಾಗಿ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ರೀತಿಯಿಂದ ಜಮೀನ್ದಾರಿವರ್ಗದ ವಿರುದ್ಧ ಕೈಕೊಂಡ ಚಳುವಳಿ ಪ್ರತಿಭಟನೆಯ ಹಿನ್ನೆಲೆಯಲ್ಲಿ ಕಾಂಗ್ರೆಸ್ ಸರಕಾರ ತನ್ನ 32 ವರ್ಷಗಳ ಆಳ್ವಿಕೆಯಲ್ಲಿ ಬಹಳಷ್ಟು ಸುಧಾರಣೆಗಳನ್ನು ತೋರ್ಪಿಕೆಗೆ ಕೈಕೊಂಡರೂ, ವಾಸ್ತವವಾಗಿ ಈ ಸುಧಾರಣೆ, ಕಾಯ್ದೆಗಳು ರೈತರ ಆಶೋತ್ತರ, ಅವರ ಮೇಲೆ ಆಗುತ್ತಿದ್ದ ಅನ್ಯಾಯ, ಅತ್ಯಾಚಾರ, ನಿರ್ದಯ ಲೂಟಿಯನ್ನು ಕೊನೆಗೊಳಿಸಲು ಆಗಿರದೆ, ಪರಿಸ್ಥಿತಿಯನ್ನು ಇನ್ನೂ ಬಿಕ್ಕಟ್ಟಿಗೆ ಒಳಪಡಿಸಿದೆ. ಸುಧಾರಣೆಯ ಹೆಸರಿನಲ್ಲಿ ತಂದ ಕಾಯ್ದೆ ಕಾನೂನುಗಳು ರೈತವರ್ಗಕ್ಕೆ ತಮ್ಮ ಜೀವನ ನಡೆಸಲು ದುಸ್ತರಗೊಳಿಸಿವೆ.

ಬಂದ ಸುಧಾರಣೆಗಳು ಜಮೀನ್ದಾರ ವರ್ಗಕ್ಕೆ ರೈತವರ್ಗದ ಶ್ರಮದ ಮೇಲೆ ಸಹಾಯಕಾರಿಯಾಗುವವೆಂದು ಈ ಲೇಖನ ಬರೆಯುವ ಉದ್ದೇಶವಾಗಿದೆ.

ಇಂದಿನ ಸ್ಥಿತಿಗತಿಗಳಲ್ಲಿ ರೈತರು ವರ್ಷಾಂತರಗಳಿಂದ ತಮ್ಮ ಒಡೆಯರಿಗೆ ಗೇಣಿಯನ್ನು ಹಣದ ರೂಪದಲ್ಲಿಯೋ, ಧಾನ್ಯಗಳ ರೂಪಗಳಲ್ಲಿಯೋ ಅಥವಾ ಇನ್ನಾವ ಕಾಣಿಕೆಯ ರೂಪಗಳಲ್ಲಿ ತೆತ್ತು ತೆತ್ತು ಜೀವಶವಗಳಾಗಿ ಬದುಕಿ ನಿಂತಿದ್ದಾರೆ. ಅವರು ತಮ್ಮ ಜಮೀನುಗಳನ್ನು ಸಾಗುವಳಿ ಮಾಡಿ ಅದರಿಂದ ತಮ್ಮ ಜೀವನ ನಡೆಸುವಾಗ ಎಲ್ಲ ಕಡೆಗಳಿಂದ ಅಂದರೆ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ರೀತಿಯಿಂದ ಸಂಕೋಲೆಗೊಳಗಾಗಿದ್ದು ಕಂಡುಬರುತ್ತದೆ.

ಒಂದು ಕಡೆಗೆ ಸರಕಾರ ರೈತರಿಂದ ವರ್ಷ ವರ್ಷಕ್ಕೆ ಹೆಚ್ಚಿಸಿದ ಭೂಕಂದಾಯ ವಸೂಲಿ ಮಾಡುತ್ತಿದೆ. ಹಳ್ಳಿಯಲ್ಲಿ ರೈತರಿಗೆ ಒಂದು ಕ್ವಿಂಟಾಲ್ ಬತ್ತ ಬೆಳೆಸಲಿಕ್ಕೆ ಕನಿಷ್ಟ ಪಕ್ಷದಲ್ಲಿ 120–130 ರೂ. ಖರ್ಚು ಬರುತ್ತಿದ್ದರೂ ರೂ. 80 ರಲ್ಲಿ ಲೆವಿ ಬತ್ತದ ಖರೀದಿ ಮಾಡಿ ನಿಷ್ಟ 40–50 ರೂ. ಲುಕ್ಸಾನು ಆಗುತ್ತಿದೆ. ಹೆಚ್ಚಿನ ದರಗಳಲ್ಲಿ ಗೊಬ್ಬರ ಮತ್ತು ಬೀಜಗಳ ವಿತರಣೆ ಮತ್ತು ಅನ್ಯಾಯದ ಸಮಂಜಸವಲ್ಲದ ನೀರಿನ ತೆರಿಗೆ ವಸೂಲಿ ಮಾಡಲಾಗುತ್ತಿದೆ. ಈ ತರಹಗಳ ನಾನಾ ಬಗೆಯಿಂದ ಅವರ ದುಡಿಮೆಯ ಫಲವನ್ನು ಸುಲಿಯುತ್ತಿದ್ದರೆ, ಇನ್ನೊಂದು ಕಡೆಗೆ ಅವರಿಗೆ ಸಾಲದ ರೂಪದಲ್ಲಿ ಕೊಡುವ ಸವಲತ್ತುಗಳಲ್ಲಿ ಹೆಚ್ಚು ಬಡ್ಡಿ, ಕಡಿಮೆ ಮುದ್ದಾತ್ತಿನ ಕಂತುಗಳು, ಪಡೆದ ಸಾಲ ಕೊಡಲು ಹಿಂದೆ ಮುಂದೆ ಅಥವಾ ಅಸಾಧ್ಯವಾಗಿ ತಪ್ಪಿದರೆ ಜುಲ್ಮಾನೆಯಿಂದ ಜಪ್ತಿ ತೆಗೆದು ವಸೂಲಿ ಮಾಡುವುದು ಇತ್ಯಾದಿ ನಡೆಯುತ್ತಲಿದೆ. ಬಾವಿ, ಕೆರೆ, ಪಂಪುಸೆಟ್ಟು ಮೊದಲಾದ ಸಣ್ಣಪುಟ್ಟ ಯೋಜನೆಗಳಿಗೆ ಸಾಲಕೊಟ್ಟು ನಂತರ ಅವರಿಗೆ ಯಾವ ರಿಯಾಯಿತಿ ಇಲ್ಲದೇ, ರೈತರು ಕೈಕೊಂಡ ಯೋಜನೆಗಳು ಪೂರ್ಣಗೊಳ್ಳದಿದ್ದರೂ ಕಟ್ಟುನಿಟ್ಟಾಗಿ ಸಾಲ ವಸೂಲಿ ಮಾಡಿಕೊಳ್ಳಲಾಗುತ್ತಿದೆ. ಸಣ್ಣ ರೈತರ, ಭೂಹೀನರ, ಕೃಷಿಕೂಲಿಗಾರರ ಆರ್ಥಿಕ ಮಟ್ಟ ಏರಿಸುವುದಿರಲಿ. ಅವರಿಗೆ ಈ ನಾನಾ ಬಗೆಯ ಸವಲತ್ತುಗಳನ್ನು ಕೊಟ್ಟಂತೆ ಮಾಡಿ ಅವರ ಗಮನವನ್ನು ಜಮೀನ್ದಾರಿ ಪದ್ಧತಿಯನ್ನು ಸಂರಕ್ಷಿಸುವ ರಾಜಕೀಯದ ಕಡೆಗೆ ಸೆಳೆದುಕೊಳ್ಳಲಾಗುತ್ತಿದೆ. ಆದರೆ ಶೇಕಡಾ 5 ರಷ್ಟು ಇರುವ ಹಳ್ಳಿಯ ಭೂಮಾಲಕರಿಗೆ ಈ ಸಹಾಯ ಸವಲತ್ತುಗಳ ಪೂರ್ಣ ಲಾಭ ಪಡೆಯಲು ಮಾತ್ರ ಸಾಧ್ಯವಾಗಿದೆ. ಆದರೆ ಬಹುಸಂಖ್ಯಾತ ರೈತರಿಗೆ ಈ ತರಹದ ಸಾಲದ ಸವಲತ್ತುಗಳು ಅವರನ್ನು ಚಿತ್ರಹಿಂಸೆಗೆ ಗುರಿಪಡಿಸಿವೆ.

ಇನ್ನೊಂದು ಕಡೆಗೆ, ಈ ಗೇಣಿದಾರ ರೈತರು ಸಾಗುವಳಿ ಮಾಡುವ ಭೂಮಿಯ ಮೇಲೆ ರಿಕಾರ್ಡಿನಲ್ಲಿ ಮುಲ್ಕಿ ಹಕ್ಕನ್ನು ಇಟ್ಟುಕೊಂಡಂತಹ ಜಮೀನ್ದಾರರು ಈ ಗೇಣಿದಾರ ರೈತರಿಂದ ತಮ್ಮ ಅವಶ್ಯಕತೆಗಿಂತ ಹೆಚ್ಚು ಲೂಟಿ ಮಾಡಿ ಜೀವಿಸಿದ್ದಾರೆ. ಮತ್ತು ಇನ್ನು ಜೀವಿಸುತ್ತಿದ್ದಾರೆ. ಜಮೀನ್ದಾರರು ಮಾಡುವ ಬಹುಮುಖ ಶೋಷಣೆ ಅಥವಾ ಅವರು ರೈತವರ್ಗಕ್ಕೆ ಕೊಡುವ ಕಿರುಕುಳವನ್ನು ಸರಕಾರ ಎದುರಿಸುವುದಿಲ್ಲ ಹೊರತು ಸಮರ್ಥಿಸುತ್ತದೆ. ಜಮೀನ್ದಾರ ವರ್ಗ ಮಾಡುವ ಎಲ್ಲ ತರದ ಅನ್ಯಾಯಕ್ಕೆ ತನ್ನ ಹೆಗಲನ್ನು ಸರಕಾರ ಕೊಡುತ್ತಾ ಬಂದಿದೆ. ಒಂದಲ್ಲ ಇನ್ನೊಂದು ಮಾಧ್ಯಮದಿಂದ ಜಮೀನ್ದಾರ ವರ್ಗಕ್ಕೆ ರೈತರ ಶ್ರಮದ ಮೇಲೆ ಜೀವಿಸಲು ಅವಕಾಶ ಮಾಡಿಕೊಡುತ್ತದೆ. ಉದಾಹರಣೆಗೆ ಮೊದಲು ಒಂದು ದಶಕದ ಪೂರ್ವ ಜಮೀನ್ದಾರರು ತಮ್ಮ ತಮ್ಮ ಗೇಣಿದಾರರಿಂದ ಗೇಣಿಯನ್ನು ಮನಬಂದಂತೆ ವಸೂಲಿ ಮಾಡಿಕೊಂಡು ಹೋಗುತ್ತಿದ್ದರೂ ಅವರಿಗೆ ಯಾವ ಪರಿಮಿತಿ ಅಥವಾ ವಸೂಲಿಯಲ್ಲಿ ಕೊಡುವ ಕಿರುಕುಳದ ಬಗ್ಗೆ ಆಕ್ಷೇಪ ಮಾಡಲಿಲ್ಲ. ಒಂದು ವೇಳೆ ಗೇಣಿದಾರರು ಜಮೀನ್ದಾರರಿಗೆ ಕೊಡುವ ಗೇಣಿಯನ್ನು ಎರಡು ಮೂರು ವರ್ಷಗಳವರೆಗೆ ತಪ್ಪಿದರೆ ಜಮೀನ್ದಾರರಿಗೆ ಅದನ್ನು ವಸೂಲಿ ಮಾಡಿಕೊಳ್ಳಲು ಕೋರ್ಟಿನಲ್ಲಿ ಅವಕಾಶಕೊಟ್ಟು ರೈತರಿಂದ ಬರುವ ಗೇಣಿಯನ್ನು ಮಾರ್ಕೆಟ್ ಬೆಲೆಯಲ್ಲಿ ಎಕರೆಗೆ ರೂ. 80–120 ರಂತೆ ವಸೂಲಿ ಮಾಡಿ ಕೊಟ್ಟಿದ್ದೂ ಇದೆ. ಇಷ್ಟೇ ಅಲ್ಲ, ಭೂಸುಧಾರಣೆ ಜಾರಿಯಾದ ನಂತರವೂ ರೈತರ ಮೇಲೆ ಬಾಕಿ ಇದ್ದ ಗೇಣಿಯನ್ನು ವಜಾಗೊಳಿಸದೇ ಅಥವಾ ಅದನ್ನು ಋಣ ವಿಮೋಚನೆಯಲ್ಲಿ ರದ್ದುಗೊಳಿಸದೆ, 1 ರೂ. ಭೂಕಂದಾಯದ ಭೂಮಿಗೆ 10 ರೂ. ಯಂತೆ ಗೇಣಿಯನ್ನು ತಹಶೀಲ್ದಾರರ ಮುಖಾಂತರ ವಸೂಲಿ ಮಾಡಲಾಗುತ್ತಿದೆ.

ಇಂಥ ಪರಿಸ್ಥಿತಿಯಲ್ಲಿ ಸರಕಾರ ಭೂಸುಧಾರಣೆ ತಂದು ಜಮೀನ್ದಾರರಿಗೆ ಪರಿಹಾರಕೊಟ್ಟು ಭೂಮಿಯ ಒಡೆತನ ಪಡೆಯಬೇಕೆಂದು ರೈತರ ಮೇಲೆ ಒತ್ತಡ ತಂದಿದ್ದರಿಂದ ಸರಕಾರ ಅಪ್ರತ್ಯಕ್ಷವಾಗಿ ಜಮೀನ್ದಾರ ವರ್ಗದ ಸಂರಕ್ಷಕವೆಂದು ಸಾಬಿತಾಗುತ್ತದೆ. ಸರಕಾರದ ಮೇಲೆ ಭರವಸೆ ಇಟ್ಟು ರೈತರು ಮೋಸಕ್ಕೆ ಒಳಗಾದುದರಲ್ಲಿ ಸಂಶಯವಿಲ್ಲ. ಆದುದರಿಂದಲೇ ಕಾರವಾರ ತಾಲ್ಲೂಕು ಕಿಸಾನ್ ಸಭೆಯು ರೈತರಿಗೆ ಸಂಘಟಿತರಾಗಿ ಹೋರಾಡಲು ಮುಂದಾಗಬೇಕೆಂದು ಕರೆಯೀಯುತ್ತದೆ. ○

ಜೀವಿಸಲು ಹೊಸ ಹೊಸ ಅವಕಾಶ ಮಾಡಿಕೊಡುತ್ತಾ ಬಂದಿವೆ. ಸರಕಾರದ ಕಾಯ್ದೆ ಕಾನೂನುಗಳು ಜಮೀನ್ದಾರವರ್ಗಕ್ಕೆ ಹಳ್ಳಿಯ ಕೂಲಿಗಾರರಿಗೆ ಇನ್ನೂ ಹೊಸ ಹೊಸ ಮಾಧ್ಯಮದ ಶೋಷಣೆಯ ವ್ಯವಸ್ಥೆ ಜಾರಿಯಲ್ಲಿಡಲು ಪುಷ್ಟಿ ಕೊಟ್ಟಿವೆ. ಆದರೆ ರೈತವರ್ಗಕ್ಕೆ ಈ ಕಾಂಗ್ರೆಸ್ ಸರಕಾರದಿಂದ ಬರೇ ಸುಧಾರಣೆಯ ಘೋಷಣೆಗಳೇ ಸಿಕ್ಕಿವೆ ಹೊರತು ದಿನದಿಂದ ದಿನಕ್ಕೆ ಅವರ ಜೀವನಮಟ್ಟ ಕೆಳಗಿಳಿಯುತ್ತಿರುವುದು ಕಂಡುಕೊಳ್ಳಬಹುದು. ಅಷ್ಟೇ ಅಲ್ಲ ಅವರು ಬಿತ್ತಿ ಬೆಳೆಸಿದ ಬೆಳೆಗೆ ಬೆಲೆ ಕುಸಿಯುತ್ತಿದ್ದು ಅವರ ಕೊಳ್ಳುವ ಶಕ್ತಿ ಕ್ಷಯಿಸುತ್ತಿದೆ. ಅವರಿಗೆ ಅವರ ಸಣ್ಣ ಪುಟ್ಟ ತುಂಡು ಭೂಮಿಗಳ ಸಾಗುವಳಿ ಮಾಡಲು ಅಸಾಧ್ಯವಾಗಿ ಅದರಿಂದ ಅವರು ದೂರ ಸರಿದು ಕೃಷಿಕೂಲಿಗಾರರಾಗುತ್ತಿದ್ದಾರೆ. ಅವರ ಮೇಲೆ ವರ್ಷ ವರ್ಷಕ್ಕೆ ಸಾಲದ ಹೊರೆಯು ಬೆಳೆಯುತ್ತಾ ಹೋಗುತ್ತಿದೆ. ಅವರು ನಿರುದ್ಯೋಗಿಗಳಾಗುತ್ತಿದ್ದಾರೆ.

ಇಂಥ ಪರಿಸ್ಥಿತಿಯಲ್ಲಿ ಬೇಸಾಯದ ಮೇಲೆಯೇ ಅವಲಂಬಿಸಿದ ನಮ್ಮ ಭಾಗದ ರೈತರ ಪರಿಸ್ಥಿತಿ ನಮ್ಮ ಕಣ್ಣುಗಳ ಮುಂದೆ ತಂದುಕೊಂಡರೆ, ಅವರ ಜೀವನಮಟ್ಟ, ಬೇಸಾಯದಲ್ಲಿದ್ದ ಅವರ ಸಮಸ್ಯೆಗಳು, ಅದನ್ನು ಎದುರಿಸಲು ಒಗ್ಗಟ್ಟಾಗಿ ಕೈಕೊಂಡ ಬಹುಮುಖ ಹೋರಾಟ ಇತ್ಯಾದಿಗಳ ಹಿನ್ನೆಲೆಯನ್ನು ಅರಿಯಲು ಸ್ವಲ್ಪಮಟ್ಟಿಗಾದರೂ

ಹಳಿಯಾಳ ಹೋರಾಟಕ್ಕೆ ಸುರಪುರದಲ್ಲಿ ಬೆಂಬಲ

ಉ.ಕ.ಜಿಲ್ಲೆಯ ಹಳಿಯಾಳದಲ್ಲಿ ಭೂಆಕ್ರಮಣವನ್ನು ಶಾಂತಯುತವಾಗಿ ನಡೆಸಿದ ಸಂದರ್ಭದಲ್ಲಿ ಪೋಲೀಸ್ ಗೋಲಿಬಾರ್ ನಡೆಸಿದ್ದನ್ನು ಖಂಡಿಸಿ ಮತ್ತು ರೈತರ ಹೋರಾಟಕ್ಕೆ ಬೆಂಬಲವಾಗಿ ಕಾರ್ಯಕ್ರಮವು 21. 6. 79 ರಂದು ನಡೆಯಿತು. ಸುರಪುರದ ನಾಗರಿಕ ಸಂಸ್ಥೆಯ ಮತ್ತು ಪ್ರಜಾಪ್ರಭುತ್ವವಾದಿ ಯುವಕರಂಗದ ವತಿಯಿಂದ ಕಾಂ. ರಾಧೇಶಾಮವರ್ಮ, ಕಾಂ. ತಮ್ಮಣ್ಣ ಗಂಪಾಪುರ ಹಾಗೂ ಕಾಂ. ಜೆ. ಅಗಸ್ಟಿನ್ ಬೇಡಿಕೆಗಳನ್ನೊಳಗೊಂಡ ಮನವಿಯನ್ನು ತಹಸೀಲ್ದಾರ್‌ರವರಿಗೆ ಸಲ್ಲಿಸಿದರು. ಬಂಧಿತರ ಬಿಡುಗಡೆಯಾಗಬೇಕು, ಗೋಲಿಬಾರು ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು, ಭೂಹೀನರಿಗೆ ಕೂಡಲೆ ಕೃಷಿಯೋಗ್ಯ ಅರಣ್ಯ ಭೂಮಿಯನ್ನು ಹಂಚಬೇಕೆಂಬಿತ್ಯಾದಿ ಬೇಡಿಕೆಗಳನ್ನು ಮನವಿಯಲ್ಲಿ ಮುಂದಿಡಲಾಗಿದೆ. ○

ಬೀದಿಬದಿವಾಸಿಗಳ ಮುಂದುವರಿದ ಹೋರಾಟ

ಬೆಂಗಳೂರಿನ ನಾಗಲಕ್ಷ್ಮಿ ನಗರದ ಬೀದಿ ಬದಿವಾಸಿಗಳು, ನಿವೇಶನ ಜಾಗಕ್ಕಾಗಿ ದಕ್ಷಿಣ ತಾಲ್ಲೂಕು ತಹಸೀಲ್ದಾರರ ಕಛೇರಿಯೆದುರು ಹಲವು ದಿನಗಳಿಂದ ಸತ್ಯಾಗ್ರಹ ಮಾಡುತ್ತಾ ಬಂದಿರುವರು. ತಾ. 18.6.79 ರಂದು ಬೇಡಿಕೆಗಳನ್ನೊಳಗೊಂಡ ಮನವಿಯನ್ನು ಮುಖ್ಯ ಕಾರ್ಯದರ್ಶಿಯವರಿಗೂ, ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಯವರಿಗೂ ಕೊಡಲಾಯಿತು. ಇವರುಗಳು ಸಮಸ್ಯೆಯನ್ನು ಮಾನವೀಯ ದೃಷ್ಟಿಯಿಂದ ನೋಡಿ, ಬೇಡಿಕೆಗಳನ್ನು ಈಡೇರಿಸುವ ಆಶ್ವಾಸನೆ ನೀಡಿದುದರಿಂದ ಸತ್ಯಾಗ್ರಹವನ್ನು ನಿಲ್ಲಿಸಲು ತೀರ್ಮಾನಿಸಲಾಯ್ತು.

ತಾ. 20.6.79ರಂದು ವಿಧಾನಪರಿಷತ್‌ನಲ್ಲಿ ವಿರೋಧ ಪಕ್ಷದ ನಾಯಕ ಶ್ರೀ ಎ.ಕೆ. ಸುಬ್ಬಯ್ಯನವರು ಬಂದು, ಸತ್ಯಾಗ್ರಹಿಗಳನ್ನುದ್ದೇಶಿಸಿ ಮಾತನಾಡಿದ ಮೇಲೆ ಸತ್ಯಾಗ್ರಹವನ್ನು ನಿಲ್ಲಿಸಲಾಯಿತು. ಬೀದಿಬದಿವಾಸಿಗಳ ಇನ್ನೂ ಹೆಚ್ಚಿನ ಹೋರಾಟಕ್ಕೆ ಬೆಂಬಲವನ್ನು ಶ್ರೀ ಸುಬ್ಬಯ್ಯನವರು ವ್ಯಕ್ತಪಡಿಸಿದರು. ಕಾಂ. ಅಡವೀಶನವರು ಮಾತನಾಡಿ, ಹೋರಾಟಕ್ಕೆ ಬೆಂಬಲವಿತ್ತವರಿಗೆಲ್ಲಾ ಕೃತಜ್ಞತೆಗಳನ್ನು ಸಲ್ಲಿಸಿದರು.

ಬೀದಿಬದಿವಾಸಿಗಳು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿ, 20.6.79 ರಂದಿನ "ಹಳಿಯಾಳದಲ್ಲಿ ಪೋಲೀಸರ ದೌರ್ಜನ್ಯದ ವಿರುದ್ಧ ಪ್ರತಿಭಟನೆ"ಯಲ್ಲೂ ಭಾಗವಹಿಸಿದ್ದರು. ○

ಶ್ರೀನಿವಾಸಪುರದಲ್ಲಿ

ರೈತರ ಧರಣಿ ಸತ್ಯಾಗ್ರಹ

ಕೋಲಾರ ಜಿಲ್ಲೆಯ ಶ್ರೀನಿವಾಸಪುರದಲ್ಲಿ. ಶ್ರೀನಿವಾಸಪುರ ತಾಲ್ಲೂಕು ರೈತಸಂಘದ ನೇತೃತ್ವದಲ್ಲಿ ರೈತರ ಮತ್ತು ವ್ಯವಸಾಯ ಕೂಲಿಗಾರರ ಧರಣಿ ಸತ್ಯಾಗ್ರಹ ನಡೆಯಿತು. ಧರಣಿ ಸತ್ಯಾಗ್ರಹವು ತಾಲ್ಲೂಕು ಕಛೇರಿ ಎದಿರು ನಡೆದು, ಈ ಕೆಳಗಿನ ಬೇಡಿಕೆಗಳನ್ನು ಮುಂದಿಡಲಾಯಿತು.

ಬೇಡಿಕೆಗಳು: 1. ಭೂಹೀನ ರೈತರಿಗೆ ವ್ಯವಸಾಯಕ್ಕೆ ಯೋಗ್ಯವಾದ ರೆವಿನ್ಯೂ ಮತ್ತು ಅರಣ್ಯ ಭೂಮಿಯನ್ನು ಹಂಚಬೇಕು. 2. ಗೇಣಿದಾರರಿಗೆ ಯಾವಪರಿಹಾರವೂ ಇಲ್ಲದೆ ಭೂಒಡೆತನಕೊಡಬೇಕು. 3. ಸ್ವಂತ ಮನೆ ಇಲ್ಲದ ದುರ್ಬಲರಿಗೆ ಖಾಲಿ ನಿವೇಶನಗಳನ್ನು ಉಚಿತವಾಗಿ ಹಂಚಿಕೆ ಮಾಡಬೇಕು ಹಾಗೂ ಮನೆಗಳನ್ನು ಕಟ್ಟಿಸಿ ಕೊಡಬೇಕು. 4. 1964 ರಿಂದ ರೈತರ ಮೇಲೆ ವಿಧಿಸಿರುವ ನೀರಾವರಿ ತೆರಿಗೆಯನ್ನು ರದ್ದುಗೊಳಿಸಬೇಕು. 5. ಹತ್ತು ಎಕರೆ ಒಳಗೆ ಭೂಮಿಯ ಒಡೆತನವನ್ನು ಪಡೆದಿರುವ ರೈತರಿಗೆ ಭೂಕಂದಾಯವನ್ನು ರದ್ದು ಮಾಡಬೇಕು. 6. ಕೃಷಿಕೂಲಿಗಾರರಿಗೆ ನಿಗದಿಯಾಗಿರುವ ಕನಿಷ್ಟ ಕೂಲಿಯನ್ನು ಜಾರಿಗೊಳಿಸಬೇಕು. 7. ನೀರಾವರಿ ಪಂಪುಸೆಟ್ಟುಗಳ ಮೇಲೆ ವಿಧಿಸಿರುವ ಹೆಚ್ಚುವರಿಯ ವಿದ್ಯುತ್‌ಶಕ್ತಿಯ ಶುಲ್ಕವನ್ನು ರದ್ದು ಮಾಡಬೇಕು. 8. ರೈತರು ಬೆಳೆದ ಬೆಳೆಗಳಿಗೆ ನ್ಯಾಯವಾದ ದರ ನಿಗದಿಯಾಗಬೇಕು. 9. ಸರ್ಕಾರಿ ಭೂಮಿಯನ್ನು ಆಕ್ರಮಿಸಿರುವ ಶ್ರೀಮಂತ ರೈತರಿಂದ ಬಿಡುಗಡೆ ಮಾಡಿಸಿ, ಭೂ ಹೀನರಿಗೆ ಹಂಚಬೇಕು. 10. ಭೂ ಹೀನರಿಗೆ ಸ್ವಂತ ಜಾಮೀನಿನ ಮೇಲೆ ಸರ್ಕಾರ ಹಾಗೂ ಬ್ಯಾಂಕುಗಳಲ್ಲಿ ಸಾಲವನ್ನು ಕಡಿಮೆ ಬಡ್ಡಿ ದರದಲ್ಲಿ ಮಂಜೂರು ಮಾಡಬೇಕು. 11. ಸರಕಾರ ಮತ್ತು ಸಹಕಾರ ಸಂಘಗಳು ರೈತರಿಂದ ದೌರ್ಜನ್ಯದಿಂದ ವಸೂಲಿ ಮಾಡುತ್ತಿರುವ ಬಡ್ಡಿ, ಸುಸ್ತಿ ಬಡ್ಡಿ ಮತ್ತು ಇತರ ವೆಚ್ಚಗಳನ್ನು ರದ್ದು ಮಾಡಬೇಕು. 12. ದಲಿತರ ಮೇಲೆ ನಡೆಯುತ್ತಿರುವ ಅಮಾನುಷ ದೌರ್ಜನ್ಯಗಳು ಕೊನೆಗಾಣಬೇಕು. 13. ಕೆ.ಎಸ್.ಆರ್.ಟಿ.ಸಿ. ಹೆಚ್ಚಿಸಿರುವ ಬಸ್ ದರವನ್ನು ರದ್ದುಗೊಳಿಸಬೇಕು.

(7ನೇ ಪುಟ ನೋಡಿ)

ಅಗತ್ಯ ಮತ್ತು ಅಗತ್ಯಮೀರಿದ ಸಾಮಾಜಿಕ ವರ್ಗಗಳು

—ಫ್ರೆಡ್ರಿಕ್ ಏಂಗೆಲ್ಸ್

(1881ರ ಆಗಸ್ಟ್ ಆರರಂದು ಲಂಡನ್ನಿನ 'ಲೇಬರ್ ಸ್ಟ್ಯಾಂಡರ್ಡ್' ಪತ್ರಿಕೆಯ ಸಂಪಾದಕೀಯವಾಗಿ ಪ್ರಕಟವಾದದ್ದು)

ಸಮಾಜದ ವಿವಿಧ ವರ್ಗಗಳು ಯಾವ ಮಟ್ಟದಲ್ಲಿ ಉಪಯುಕ್ತ ಅಥವ ಅಗತ್ಯವೂ ಆಗಿವೆ ಎಂಬ ಪ್ರಶ್ನೆಯು ಆಗಾಗ್ಗೆ ಏಳುತ್ತಿದೆ. ಇದಕ್ಕೆ ಉತ್ತರವು ಸ್ವಾಭಾವಿಕವಾಗಿಯೇ ಬೇರೆ ಬೇರೆ ಚಾರಿತ್ರಿಕ ಘಟ್ಟಗಳನ್ನು ಎಣಿಸಿದಾಗ ಪ್ರತಿಯೊಂದಕ್ಕೂ ಬೇರೆ ಬೇರೆಯೇ ಆಗಿರುವುದು. ಪ್ರಾದೇಶಿಕ ಶ್ರೀಮಂತರ ಅಧಿಕಾರವು ಅನಿವಾರ್ಯವೂ ಅಗತ್ಯವೂ ಆಗಿದ್ದ ಕಾಲವೊಂದು ಇದ್ದುದು ನಿಸ್ಸಂಶಯ. ಆದರೆ ಅದು ಬಹು ಹಿಂದಿನ ಕಾಲದ ಮಾತು. ಅದಾದ ನಂತರ ಬಂಡವಾಳಶಾಹಿ ಮಧ್ಯಮ ವರ್ಗವೊಂದು ಅಷ್ಟೇ ಅನಿವಾರ್ಯವಾಗಿ ಉದಯಿಸಿ ಪ್ರಾದೇಶಿಕ ಶ್ರೀಮಂತರ ಅಧಿಕಾರದ ಎದುರಾಗಿ ಹೋರಾಟ ನಡೆಸಿ ಅದರ ರಾಜಕೀಯ ಶಕ್ತಿಯನ್ನು ಮುರಿದು ಅದರ ಜಾಗದಲ್ಲಿ ಆರ್ಥಿಕವಾಗಿಯೂ ಮತ್ತು ರಾಜಕೀಯವಾಗಿಯೂ ಪ್ರಾಬಲ್ಯಗಳಿಸಿದ ಒಂದು ಕಾಲವಿತ್ತು. ಆದರೆ ವರ್ಗಗಳು ಪ್ರಾರಂಭವಾದಾರಭ್ಯ ಎಂದೇ ಆಗಲಿ ಕೆಲಸ ಮಾಡುವ ವರ್ಗವೊಂದಿಲ್ಲದೆ ಸಮಾಜವು ಬಾಳಿದ ಯಾವ ಕಾಲವೂ ಇಲ್ಲ. ಈ ವರ್ಗದ ಹೆಸರು ಮತ್ತು ಸಾಮಾಜಿಕ ಸ್ಥಾನ ಮಾತ್ರ ಬದಲಾಗಿದೆ. ಗುಲಾಮನ ಸ್ಥಾನವನ್ನು ಭೂ ಜೀತದವನು ತೆಗೆದುಕೊಂಡನು. ಮತ್ತೆ ಅವನ ಸ್ಥಾನವನ್ನು ಸ್ವತಂತ್ರ ಕೆಲಸಗಾರನು ತೆಗೆದುಕೊಂಡನು. ಇವನ ಗುಲಾಮತನವು ಹೋದುದರ ಜತೆಗೆ ಇವನ ಶ್ರಮ ಶಕ್ತಿಯು ಹೊರತಾಗಿ ಯಾವುದೇ ಪ್ರಾಪಂಚಿಕ ಒಡೆತನವೂ ಇವನಲ್ಲಿ ಉಳಿಯಲಿಲ್ಲ. ಅಂದಮೇಲೆ ಒಂದಂತೂ ಸ್ಪಷ್ಟ. ಅಂದರೆ, ಸಮಾಜದ ಅನುತ್ಪಾದಕ ಮೇಲ್ವರ್ಗದಲ್ಲಿ ಯಾವುದೇ ಬದಲಾವಣೆ ನಡೆಯಲಿ ಉತ್ಪಾದನೆಗಾರರ ಒಂದುವರ್ಗವಿಲ್ಲದೆ ಸಮಾಜವು ಎಂದೂ ಬದುಕಲಾರದು. ಹೀಗಿರುವಾಗ ಎಲ್ಲಾ ಸನ್ನಿವೇಶಗಳಲ್ಲೂ ಈ ವರ್ಗವು ಅಗತ್ಯದ್ದೆಂದಾಯಿತು ಇದು ತಾನೊಂದು ವರ್ಗವಾಗಿರುವುದು ಹೋಗಿ ಇಡಿ ಸಮಾಜವೇ ಅದಾಗುವ ಕಾಲವು ಬರುವುದಿದೆಯೆನ್ನಿ.

ಈಗ ಈ ಮೂರೂ ವರ್ಗಗಳಲ್ಲಿ ಪ್ರತಿಯೊಂದರ ಇರುವಿಕೆಗೂ ಸದ್ಯದ ಸಮಾಜದಲ್ಲಿ ಅಗತ್ಯವೇನಿದೆ? ಭೂಶ್ರೀಮಂತಿಕೆಯವರು, ಏನೇಹೇಳಿದರೂ...ಆರ್ಥಿಕವಾಗಿ ನಿರುಪಯುಕ್ತರಾದವರು... ಜನರನ್ನು ಸಾಗರದಾಚೆಗೆ ಅಥವಾ ಹಸಿವಿನ ಬವಣೆಗೆ ತಳ್ಳುವವರು... ಅವರು ತಮ್ಮ ಶ್ಲಾಘನೆಯನ್ನು ಸಮರ್ಥಿಸಿಕೊಳ್ಳಬಹುದಾದ್ದು ಇಷ್ಟಕ್ಕೇ. ಅಮೆರಿಕಾದ ವ್ಯವಸಾಯ ಅಭಿವೃದ್ಧಿಯು ಇನ್ನೂ ಹೆಚ್ಚು ಮುನ್ನಡೆದರೆ ಇವರ ಪಾಡು ಕೊನೆಯಾಗುವುದು. ಇದರ ಮೇಲ್ಮನೆ ಮತ್ತು ಕೆಳಮನೆಗಳೆರಡರಲ್ಲಿಯ ರಾಜಕೀಯ ಕಾರ್ಯಾಚರಣೆಯು ರಾಷ್ಟ್ರಕ್ಕೆ ಅನಿಷ್ಟಕಾರಿಮಾತ್ರವಾಗುವುದು.

ಆದರೆ, ಬ್ರಿಟಿಷರ ವಸಾಹತು ಸಾಮ್ರಾಜ್ಯವನ್ನು ಸ್ಥಾಪಿಸಿದ ಮತ್ತು ಬ್ರಿಟಿಷ್ ಸ್ವಾತಂತ್ರವನ್ನು ಸ್ಥಾಪಿಸಿದ ಆ ಎಚ್ಚೆತ್ತ ಮತ್ತು ಉದಾರವಾದಿ ವರ್ಗವಾದ ಬಂಡವಾಳಶಾಹಿ ಮಧ್ಯಮ ವರ್ಗದ ಬಗ್ಗೆ ಹೇಗೆ? 1831ರಲ್ಲಿ ಪಾರ್ಲಿಮೆಂಟಿನಲ್ಲಿ ಸುಧಾರಣೆ ತಂದು ಧಾನ್ಯ ಶಾಸನವನ್ನು ರದ್ದುಪಡಿಸಿ ಮೇಲಿಂದ ಮೇಲೆ ತೆರಿಗೆಗಳನ್ನು ಇಳಿಸಿದ ಆ ವರ್ಗ? ಇಂಗ್ಲೆಂಡಿನಲ್ಲಿ ಬೃಹತ್ ಕಾರ್ಖಾನೆಗಳನ್ನು ಸ್ಥಾಪಿಸಿ ಬಹು ದೊಡ್ಡ ವ್ಯಾಪಾರಿ ನೌಕಾಪಡೆಯನ್ನು ಮತ್ತು ನಿತ್ಯವಿಸ್ತಾರಗೊಳ್ಳುತ್ತಿರುವ ರೈಲ್ವೆ ವ್ಯವಸ್ಥೆಯನ್ನು ಸೃಷ್ಟಿಸಿದ ಮತ್ತು ಇಂದಿಗೂ ನಿರ್ದೇಶಿಸುತ್ತಿರುವ ಆ ವರ್ಗ ತಾನು ನಿರ್ದೇಶಿಸುವ ಮತ್ತು ದಿನೇ ದಿನೇ ಪ್ರಗತಿಯತ್ತ ಕೊಂಡೊಯ್ಯುತ್ತಿರುವ ಆ ವರ್ಗ ಖಂಡಿತವಾಗಿಯೂ ಕಾರ್ಮಿಕವರ್ಗದಷ್ಟೇ ಅಗತ್ಯವಿರಬೇಕು.

ಇಲ್ಲಿನವರೆಗೆ ನಿಜವಾಗಿಯೂ ಬಂಡವಾಳಶಾಹಿ ಮಧ್ಯಮವರ್ಗದ ಆರ್ಥಿಕ ಮಿತವ್ಯಯ ಕರ್ತವ್ಯವು ಶಕ್ತಿಯಂತ್ರ ಸಜ್ಜಿತ ಕಾರ್ಖಾನೆಗಳ ಮತ್ತು ಸಾರಿಗೆ ಸಂಪರ್ಕಗಳ ಆಧುನಿಕ ವ್ಯವಸ್ಥೆಯನ್ನು ಸೃಷ್ಟಿಸುವುದು ಮತ್ತು ಅಂಥ ಬೆಳವಣಿಗೆಯನ್ನು ನಿಧಾನಗೊಳಿಸುವ ಅಥವಾ ಅಡ್ಡಿಪಡಿಸುವ ಎಲ್ಲಾ ರೀತಿಯ ಆರ್ಥಿಕ ಮತ್ತು ರಾಜಕೀಯ ಅಡ್ಡಿಗಳನ್ನೂ ತುಳಿಯುವುದು ಆಗಿತ್ತು. ಎಲ್ಲಿನವರೆಗೆ ಬಂಡವಾಳಶಾಹಿ ಮಧ್ಯಮ ವರ್ಗವು ಈ ಕರ್ತವ್ಯಗಳನ್ನು ನಡೆಸಿಕೊಡುತ್ತಿತ್ತೋ ಅಲ್ಲಿನವರೆಗೂ ಆ ಸನ್ನಿವೇಶಗಳಡಿಯಲ್ಲಿ ನಿಸ್ಸಂಶಯವಾಗಿಯೂ ಅದೊಂದು ಅಗತ್ಯವಾದ ವರ್ಗವಾಗಿತ್ತು. ಆದರೆ ಅದು ಇಂದಿಗೂ ಹಾಗೆ ಇದೆಯೇ? ಅದು ಸಮಗ್ರ ಸಮಾಜದ ಅನುಕೂಲಕ್ಕಾಗಿ ಸಾಮಾಜಿಕ ಉತ್ಪಾದನೆಯ ನಿರ್ವಾಹಕ ಮತ್ತು ವಿಸ್ತಾರಕನಾಗಿ ಅದರ ಮೂಲ ಕರ್ತವ್ಯ ನಿರ್ವಹಣೆಯಲ್ಲಿ ಮುಂದುವರಿಯುತ್ತಿದೆಯೇ? ಇದನ್ನು ಈಗ ನಾವು ನೋಡೋಣ.

ಮೊದಲು ಸಂಪರ್ಕ ಸಾಧನಗಳನ್ನು ಎತ್ತಿಕೊಂಡರೆ ಅಂಚೆ ಟೆಲಿಗ್ರಾಫ್ ಸೇವೆಯು ಸರಕಾರದ ಕೈಗಳಲ್ಲಿರುವುದನ್ನು ನಾವು ನೋಡುತ್ತೇವೆ. ರೈಲ್ವೆಗಳು ಮತ್ತು ಸಾಗರ ಸಂಚಾರ ಹಡಗುಗಳ ಬಹು ದೊಡ್ಡ ಭಾಗವು ತಮ್ಮ ಸ್ವಂತ ವ್ಯವಹಾರವನ್ನು ನಿರ್ವಹಿಸುವಂಥ ಬಿಡಿ ಬಂಡವಾಳಶಾಹಿಗಳ ಕೈಯಲ್ಲಿಲ್ಲ. ಬದಲಾಗಿ ಜಾಯಿಂಟ್ ಸ್ಟಾಕ್ ಕಂಪನಿಗಳ ಒಡೆತನದಲ್ಲಿವೆ. ಇದರ ವ್ಯವಹಾರ ನಿರ್ವಹಣೆಯು ಎಲ್ಲಾ ಸಂಕಲ್ಪೋದ್ದೇಶಗಳಿಂದಲೂ ಮೇಲ್ದರ್ಜೆಯ ಉತ್ತಮ ಸಂಬಳದ ಕೆಲಸಗಾರರ ಸ್ಥಿತಿಯಲ್ಲಿರುವ ಸಂಬಳದ ನೌಕರರಿಂದ ನಿರ್ವಹಿಸಲ್ಪಡುತ್ತಿದೆ. ಡೈರೆಕ್ಟರುಗಳು ಮತ್ತು ಷೇರುದಾರರ ಬಗ್ಗೆ ಹೇಳುವುದಾದರೆ, ನಿರ್ವಹಣೆ ಮತ್ತು ಮೇಲ್ವಿಚಾರಣೆಯಲ್ಲಿ ಇವರು ಅದಷ್ಟೂ ಕಡಿಮೆ ಹಸ್ತಕ್ಷೇಪ ಮಾಡುವುದೇ ಉದ್ದಿಮೆಗೆ ಒಳ್ಳೆಯದೆಂದು ಈ ಇಬ್ಬರೂ ಅರ್ಥಮಾಡಿಕೊಂಡಿದ್ದಾರೆ. ಒಂದು ರೀತಿಯ ಸಡಿಲ ಮತ್ತು ಹೆಸರಿಗೆ ಮಾತ್ರದ ಮೇಲ್ವಿಚಾರಣೆಯು ಮಾತ್ರವೇ ನಿಜವಾಗಿಯೂ ಈ ಉದ್ದಿಮೆಗಳ ಒಡೆಯರಿಗೆ ಉಳಿದಿರುವ ಕರ್ತವ್ಯವಾಗಿದೆ. ಈ ಬೃಹತ್ ವ್ಯವಸ್ಥಾಪನೆಗಳ ಬಂಡವಾಳಶಾಹಿ ಒಡೆಯರಿಗೆ ಅರ್ಧವರ್ಷಕ್ಕೊಮ್ಮೆ ಇವರ ಲಾಭಪತ್ರಗಳನ್ನು ನಗದುಗೊಳಿಸುವುದಲ್ಲದೆ ಬೇರಾವ ಕೆಲಸವೂ ನಿಜವಾಗಿ ಉಳಿದಿಲ್ಲವೆಂಬುದನ್ನು ನಾವು ನೋಡುತ್ತಿದ್ದೇವೆ. ಇಲ್ಲಿ ಬಂಡವಾಳಶಾಹಿಗಳ ಸಾಮಾಜಿಕ ಕರ್ತವ್ಯವು ಸಂಬಳಗಾರ ನೌಕರರಿಗೆ ವರ್ಗಾಯಿಸಲ್ಪಟ್ಟಿದೆ. ಆದರೂ, ಅವರು ಮಾಡುತ್ತಿದ್ದ ಕೆಲಸಗಳು ನಿಂತುಹೋಗಿದ್ದರೂ ಸಹ, ಆ ಕೆಲಸಗಳಿಗಾಗಿ ಲಾಭಗಳ ರೂಪದಲ್ಲಿ ವೇತನಗಳನ್ನು ಪಡೆಯುತ್ತಲೇ ಇದ್ದಾರೆ.

ದೊಡ್ಡ ಉದ್ದಿಮೆಗಳ ವಿಸ್ತಾರವು ಈ ಬಂಡವಾಳಶಾಹಿಗಳನ್ನು ಬಲವಂತವಾಗಿ ನಿವೃತ್ತಿಗೊಳಿಸಿದ್ದರೂ ಅವರಿಗೆ ಇನ್ನೂ ಒಂದು ಕೆಲಸವನ್ನು ಅವರಿಗಾಗಿ ಬಿಟ್ಟಿದೆ. ಈ ಕೆಲಸವು ಷೇರು ಪೇಟೆಯಲ್ಲಿ ತಮ್ಮ ಷೇರುಗಳ ಸಟ್ಟಾ ನಡೆಸುವುದು. ಏನನ್ನಾದರೂ ಮಾಡುವುದು ಉತ್ತಮವೆಂದುಕೊಂಡ ಈ "ನಿವೃತ್ತ", ಅಥವಾ ನಿಜವಾಗಿ ಹೇಳುವುದಾದರೆ, ಹೊರಹಾಕಲ್ಪಟ್ಟ ಬಂಡವಾಳಶಾಹಿಗಳು ಈ ಧನ ಪಿಶಾಚಿಯ ದೇಗುಲದಲ್ಲಿ ತಮ್ಮ ಮನಃ ತೃಪ್ತಿಯಾಗಿ ಜೂಜಾಡುತ್ತಾರೆ. ಅವರು ಅಲ್ಲಿಗೆ ಹೋಗುವ ಉದ್ದೇಶವು ಎಷ್ಟಾದರಷ್ಟು ಹಣವನ್ನು ಕಬಳಿಸುವುದಕ್ಕಾಗಿ ಇದನ್ನು ಅವರು ಸಂಪಾದನೆಯೆಂದು ಮರೆಮಾಚುತ್ತಾರೆ. ಆಸ್ತಿಯ ವಿಶಿಷ್ಟ ಮೂಲವು ಶ್ರಮ ಮತ್ತು ಉಳಿತಾಯವೆಂದು ಅವರೇ ಹೇಳುತ್ತಾರಾದರೂ ಅದು ಮೂಲವೇನೋ ನಿಜ, ಆದರೆ ನಿಜವಾಗಿಯೂ ಅದೇ ಏನೂ ಅಂತ್ಯವಲ್ಲ. ಬಂಡವಾಳಶಾಹಿ ಸಮಾಜವು ಎಂಥ ಹೊಟ್ಟೆಕಿಚ್ಚಿನದೆಂದರೆ ಸಣ್ಣ ಪುಟ್ಟ ಜೂಜು ಕಟ್ಟೆಗಳನ್ನು ಮುಚ್ಚಲು ಬಲವಂತಪಡಿಸುತ್ತದೆ. ಆದರೆ ತನ್ನ ಕೇಂದ್ರದಲ್ಲಿಯೇ ಲಕ್ಷಗಟ್ಟಲೆ ಸೋಲುವುದು ಗೆಲ್ಲುವುದು ನಡೆಯುತ್ತಿರುವ ಬೃಹತ್ ಜೂಜುಕಟ್ಟೆಯಿಲ್ಲದೆ ತಾನಿರಲಾರದು. ನಿಜವಾಗಿಯೂ ಹೀಗಾಗಿರುವಾಗಲೇ ಈ "ನಿವೃತ್ತ" ಷೇರುಧಾರ ಬಂಡವಾಳಶಾಹಿಗಳ ಅಸ್ತಿತ್ವವು ಅಗತ್ಯಮೀರಿದ್ದು ಮಾತ್ರವಲ್ಲದೆ ಕೀಳಾ, ಅಸಹನೀಯವೂ ಆಗಿದೆ.

ರೈಲ್ವೆಗಳು ಮತ್ತು ಆವಿಯ ಹಡಗುಗಳ ಬಗ್ಗೆ ಇದೆಷ್ಟು ನಿಜಸ್ಥಿತಿಯಾಗಿ ಇದೆಯೋ ಅಷ್ಟೇ ರೀತಿಯಲ್ಲಿ ಇದು ದಿನೇ ದಿನೇ ಎಲ್ಲಾ ದೊಡ್ಡ ಪ್ರಮಾಣದ ಕಾರ್ಖಾನೆಗಳು ಮತ್ತು ವಾಣಿಜ್ಯ ವ್ಯವಸ್ಥೆಗಳಿಗೂ ಹೆಚ್ಚು ಹೆಚ್ಚು ನಿಜವೆನಿಸುತ್ತದೆ. ಖಾಸಗಿ ದೊಡ್ಡ ಉದ್ದಿಮೆಗಳನ್ನು ಲಿಮಿಟೆಡ್ ಕಂಪನಿಗಳನ್ನಾಗಿ ಪರಿವರ್ತಿಸಲು ಷೇರುಗಳನ್ನು ಚಲಾವಣೆಗೆ ತರುವ ವ್ಯವಸ್ಥೆಯು ಅನೇಕ ದಶಕಗಳಿಗಿಂತ ಹೆಚ್ಚಿನ ಕಾಲದಿಂದಲೂ ನಿತ್ಯಕ್ರಮವಾಗಿದೆ. ದೊಡ್ಡ ದೊಡ್ಡ ಮಳಿಗೆಗಳಿಂದ ಹಿಡಿದು ಕಬ್ಬಿಣ ಕಾರ್ಖಾನೆಗಳು, ಕಲ್ಲಿದ್ದಲಿನ ಗಣಿಗಳು ಮತ್ತು ಫ್ಯಾಕ್ಟರಿಗಳೂ ಸೇರಿದಂತೆ ಪ್ರತಿಯೊಂದನ್ನೂ ಷೇರುಗಳಾಗಿ ಚಲಾವಣೆಗೊಳಿಸಲಾಗಿದೆ ಅಥವಾ ಗೊಳಿಸಲಾಗುತ್ತಿದೆ. ಓಲ್ಡ್‌ಹ್ಯಾಂನಲ್ಲಿ ಒಂದೇ ಒಂದು ಹತ್ತಿಗಿರಣಿಯೂ ಖಾಸಗಿಯವರ ಕೈಯಲ್ಲಿ ಉಳಿದಿಲ್ಲವಷ್ಟೇ ಅಲ್ಲ, ಚಿಲ್ಲರೆ ವ್ಯಾಪಾರಿಗಳನ್ನೂ ಸಹ "ಸಹಕಾರಿ ಅಂಗಡಿಗಳು" ಆಕ್ರಮಿಸುತ್ತಿವೆ. ಇವುಗಳಲ್ಲಿ ಹೆಚ್ಚಿನವು ಹೆಸರಿಗೆ ಮಾತ್ರ ಸಹಕಾರಿ. ಈ ರೀತಿಯಲ್ಲಿ ನಾವು ನೋಡುತ್ತಿರುವುದೇನೆಂದರೆ, ಇದೇ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯ ಬೆಳವಣಿಗೆಯಿಂದ ಹೇಗೆ ಕೈಮಗ್ಗದ ನೇಕಾರರನ್ನು ಹೇಗೆ ಹಿಂದಕ್ಕೆ ತಳ್ಳಲ್ಪಟ್ಟರೋ ಅದೇ ರೀತಿಯಲ್ಲಿ ಬಂಡವಾಳಶಾಹಿಗಳೂ ತಳ್ಳಲ್ಪಡುತ್ತಿದ್ದಾರೆ. ಇದರಲ್ಲಿ ವ್ಯತ್ಯಾಸವೇನೆಂದರೆ ಕೈಮಗ್ಗದ ನೇಕಾರರು ಹಸಿವಿನಬಾಧೆಯಿಂದ ನಿಧಾನವಾಗಿ ಸಾಯುತ್ತಾರಾದರೆ, ಅಗತ್ಯದಿಂದ ಹೊರತಳ್ಳಲ್ಪಟ್ಟ ಬಂಡವಾಳಶಾಹಿಗಳು ಅತಿಯಾಗಿ ತಿನ್ನುವುದರಿಂದ ನಿಧಾನ ಸಾವಿಗೆ ಸಾಗುತ್ತಿದ್ದಾರೆ. ಈ ವಿಷಯದಲ್ಲಿ ಅವರಿಬ್ಬರಲ್ಲೂ ವ್ಯತ್ಯಾಸವಿಲ್ಲ. ಅಂದರೆ ತಮ್ಮನ್ನು ತಾವು ಏನುಮಾಡಬೇಕೆಂಬುದೇ ಇಬ್ಬರಿಗೂ ತಿಳಿದಿಲ್ಲ.

ಅಂದಮೇಲೆ ಇದರ ಫಲಿತಾಂಶ ಇಷ್ಟೆ. ವಸ್ತುಸ್ಥಿತಿಯಲ್ಲಿ ನಮ್ಮ ಸಮಾಜದ ಆರ್ಥಿಕ ಅಭಿವೃದ್ಧಿಯು ಹೆಚ್ಚು ಹೆಚ್ಚು ಇನ್ನು ಯಾವನೇ ಬಿಡಿ ಬಂಡವಾಳಶಾಹಿಯಿಂದ ಎಂದಿಗೂ ನಿರ್ವಹಿಸಲಾಗದಂಥ ಬೃಹತ್ ವ್ಯವಸ್ಥೆಯ ಕೇಂದ್ರೀಕೃತ ಸಮಾಜೀಕೃತ ಉತ್ಪಾದನೆಯಾಗಿ ಪರಿವರ್ತಿತವಾಗುತ್ತಿದೆ. ಯಾವುದೇ ಉದ್ಯಮವು ಒಂದು ಗೊತ್ತಾದ ಗಾತ್ರವನ್ನು ತಲುಪಿದ ತಕ್ಷಣವೇ "ಒಡೆಯನ ಕಣ್ಣು" ಮತ್ತು ಅದು ಮಾಡುವ ಚಮತ್ಕಾರ ಎಂಬಿತ್ಯಾದಿ ಕೆಲಸಕ್ಕೆ ಬಾರದ ಮಾತುಗಳೆಲ್ಲಾ ಕೇವಲ ಅರ್ಥಹೀನವಾಗುತ್ತವೆ. ಬೃಹತ್ ವ್ಯವಸ್ಥಿತ ರೈಲ್ವೆಯ "ಒಡೆಯನ ಕಣ್ಣುಗಳನ್ನು" ಊಹಿಸಿಕೊಳ್ಳಿ! ಅಂದರೆ ಒಡೆಯನು ಮಾಡಲಾರದ್ದನ್ನು ಕೆಲಸಗಾರರು, ಕಂಪನಿಯ ವೇತನ ಪಡೆದ ನೌಕರರು, ಮಾಡಬಲ್ಲರು, ಅಷ್ಟೇ ಅಲ್ಲ ಅದನ್ನು ಅವರು ತೃಪ್ತಿಕರವಾಗಿಯೂ ಮಾಡಬಲ್ಲರು.

ಆದ್ದರಿಂದ ಇನ್ನುಮೇಲೆ ಬಂಡವಾಳಶಾಹಿಯು "ಮೇಲ್ವಿಚಾರಣೆಯ ವೇತನಗಳಂತೆ" ಅವನ ಲಾಭಗಳ ಹಕ್ಕನ್ನು ಸ್ಥಾಪಿಸಲಾರ. ಏಕೆಂದರೆ ಅವನು ಯಾವುದರ ಮೇಲ್ವಿಚಾರಣೆಯನ್ನೂ ಮಾಡುತ್ತಿಲ್ಲ. ಬಂಡವಾಳದ ಪ್ರತಿಪಾದಕರು ಈ ಟೊಳ್ಳು ಮಾತುಗಳನ್ನು ನಮ್ಮ ಕಿವಿಗಳಲ್ಲಿ ಕೂರುವಂತೆ ಸಾರುವಾಗ ನಾವು ಇದನ್ನು ನೆನಪಿಟ್ಟುಕೊಳ್ಳೋಣ.

ಈ ದೇಶದ ಬೃಹತ್ ಉತ್ಪಾದನಾ ವ್ಯವಸ್ಥೆಯನ್ನು ನಿರ್ವಹಿಸಲು ಬಂಡವಾಳಶಾಹಿವರ್ಗವೂ ಅಸಮರ್ಥವಾಗಿದೆ ಎಂಬುದನ್ನೂ, ಒಂದು ಕಡೆ ಅವರು ಉತ್ಪತ್ತಿಗಳಿಂದ ಎಲ್ಲಾ ಮಾರುಕಟ್ಟೆಗಳನ್ನೂ ಆಗಾಗ್ಗೆ ತುಂಬಿ ಹರಿಯುವಷ್ಟು ಉತ್ಪಾದನೆಯನ್ನು ಹೆಚ್ಚಿಸಿರುತ್ತಾರೆ, ಇನ್ನೊಂದು ಕಡೆ ವಿದೇಶಿ ಪ್ರೈಪೋಟಿಯ ಎದುರಾಗಿ ತಮ್ಮದನ್ನು ಬಿಗಿಯಾಗಿ ಹಿಡಿಯಲೂ ಹೆಚ್ಚು ಹೆಚ್ಚು ಅಸಮರ್ಥರಾಗಿದ್ದಾರೆ ಎಂಬೆಲ್ಲವನ್ನೂ ನಿತ್ಯಕತೆಯಾಗಿ ನಾವು ನೋಡುತ್ತಿದ್ದೇವೆ. ಹೀಗೆ ದೇಶದ ಬೃಹತ್ ಕೈಗಾರಿಕೆಗಳಲ್ಲಿ ಬಂಡವಾಳಶಾಹಿ ವರ್ಗದ ಹಸ್ತಕ್ಷೇಪವಿಲ್ಲದೆಯೇ ಅಚ್ಚುಕಟ್ಟಾಗಿ ನಾವು ನಿರ್ವಹಿಸಬಲ್ಲೆವೆಂಬುದು ಮಾತ್ರವೇ ಅಲ್ಲದೆ ಅವರ ಹಸ್ತಕ್ಷೇಪವು ದಿನೇ ದಿನೇ ಹೆಚ್ಚು ಹೆಚ್ಚು ಅಸಹನೀಯವೂ ಆಗುತ್ತಿದೆ.

ಆದ್ದರಿಂದ ಮತ್ತೆ ಅವರಿಗೆ ನಾವು ಹೇಳುತ್ತೇವೆ "ಹಿಂದೆ ಸರಿದು ನಿಲ್ಲಿ! ಕೆಲಸಗಾರ ವರ್ಗಕ್ಕೆ ಒಂದು ಸರದಿಯ ಅವಕಾಶವನ್ನು ಕೊಡಿ." ●

ತಮಿಳು ನಾಡಿನಲ್ಲಿ

ಮಾರ್ಕ್ಸಿಸ್ಟ್ ಕಾರ್ಯಕರ್ತರಿಗೆ ಚೂರಿ ಇರಿತ

ಚುನಾವಣೆಯಲ್ಲಿ ಅನುಭವಿಸಿದ ಸೋಲನ್ನು ಸಹಿಸದ ಆಡಳಿತ ಪಕ್ಷದ ಗೂಂಡಾಗಳು ರಾಜ್ಯದ ಅನೇಕ ಕಡೆಗಳಲ್ಲಿ ಮಾರ್ಕ್ಸಿಸ್ಟ್ ಕಾರ್ಯಕರ್ತರ ಮೇಲೆ ಪೂರ್ವನಿಯೋಜಿತ ಹಲ್ಲೆಗಳನ್ನು ನಡೆಸುತ್ತಿದ್ದಾರೆ. ಇವುಗಳಲ್ಲಿ ಈಚೆಗೆ ಮಧುರೈನಲ್ಲಿ ಜರುಗಿದ ಘಟನೆ ಗಮನೀಯವಾದುದು. ಜೂನ್ 23 ರಂದು ರಾತ್ರಿ 1 ಗಂಟೆ ಸಮಯದಲ್ಲಿ ಕಾಂ. ಜ್ಯೋತಿಬಸುರವರ ಕಾರ್ಯಕ್ರಮವೊಂದಕ್ಕೆ ಸಂಬಂಧಿಸಿದಂತೆ ಗೋಡೆಗಳ ಮೇಲೆ ಪ್ರಚಾರ ಬರಹಗಳನ್ನು ಬರೆಯುತ್ತಿದ್ದ ಮಾರ್ಕ್ಸಿಸ್ಟ್ ಪಕ್ಷದ ಕಾರ್ಯಕರ್ತರ ಮೇಲೆ A.D.M.K. ಪಕ್ಷದ ಗೂಂಡಾಗಳು ಹಲ್ಲೆ ನಡೆಸಿ ಚೂರಿಯಿಂದ ಅನೇಕರನ್ನು ಇರಿದರು. ಈ ಹಲ್ಲೆಯಲ್ಲಿ ಸೈಕಲ್ ಚೈನ್, ಸೋಡಾ ಬಾಟಲ್‌ಗಳನ್ನೂ ಸಹ ಬಳಸಲಾಯಿತು. ಈ ಘಟನೆಯಿಂದ ಆ ಭಾಗದಲ್ಲಿ ಗಂಭೀರ ವಾತಾವರಣ ನೆಲೆಸಿದೆ. ●

ಲೆನಿನ್ನರ ಅತ್ಯದ್ಭುತ ಶಿಷ್ಯ - ಸ್ಟಾಲಿನ್

—ಬಿ.ಟಿ. ರಣದಿವೆ

[ಮುಂದುವರಿದುದು]

ಹಿಟ್ಲರ್‌ನನ್ನು ಸೋವಿಯತ್ ಒಕ್ಕೂಟ ಸೋಲಿಸಿದ ಮೇಲೆ ಜಗತ್ತಿನ ಚಿತ್ರವೇ ಬದಲಾಯಿತು. ಜಗತ್ತಿನ ಶಕ್ತಿಗಳ ಗುಂಪು ಕಾರ್ಮಿಕವರ್ಗ ಮತ್ತು ಸಮಾಜವಾದದ ಕಡೆಗೆ ನಿರ್ಣಾಯಕವಾಗಿ ಬದಲಾಯಿತು. ಯುರೋಪಿನಲ್ಲಿ ಅನೇಕ ಸಮಾಜವಾದಿ ಕ್ರಾಂತಿಗಳು ನಡೆದವು. ಇದಾದನಂತರ ಚೀನದ ಮಹಾಕ್ರಾಂತಿ ನಡೆಯಿತು. ಸೋವಿಯತ್ ಒಕ್ಕೂಟದ ಮೇಲೆ ಯುದ್ಧ ಸಾರಿದರೆ ಅವರ ಸರ್ಕಾರಗಳು ಉಳಿಯುವುದಿಲ್ಲವೆಂದು 1939 ರಲ್ಲಿ ಸ್ಟಾಲಿನ್ ಬಂಡವಾಳಶಾಹಿ ವರ್ಗಕ್ಕೆ ಎಚ್ಚರಿಕೆ ಕೊಟ್ಟಿದ್ದರು. ಈ ಎಚ್ಚರಿಕೆ ನಿಜವಾಯಿತು. ಅಮೆರಿಕದ ಸಾಮ್ರಾಜ್ಯಶಾಹಿಯೇ ಎಲ್ಲ ಜನತೆಯ ಪ್ರಮುಖ ಶತ್ರು ಮತ್ತು ಜಗತ್ತಿನಲ್ಲಿ ಎರಡು ಬಣಗಳು ಮಾತ್ರ ಕೊನೆಗೆ ಉಳಿಯುವುದು. ಅವು ಸಮಾಜವಾದಿ ಬಣ ಮತ್ತು ಸಾಮ್ರಾಜ್ಯವಾದಿ ಬಣ ಎಂದು ಸೋವಿಯತ್ ಒಕ್ಕೂಟಕ್ಕೆ ಮತ್ತು ಜಗತ್ತಿನ ಕಾರ್ಮಿಕ ವರ್ಗಕ್ಕೆ ಮೊತ್ತಮೊದಲು ಎಚ್ಚರಿಕೆ ಕೊಟ್ಟಿದ್ದು ಸ್ಟಾಲಿನ್.

ಮಾರ್ಷಲ್ ಏಡ್ ಯೋಜನೆಯ ಮೂಲಕ ಯುರೋಪಿನಲ್ಲಿ ಅಧಿಪತ್ಯ ಸ್ಥಾಪಿಸಲು ಹೆಣಗುತ್ತಿದ್ದ ಮತ್ತು ಯುರೋಪಿನ ವಿಮೋಚಿತ ಸಮಾಜವಾದಿ ದೇಶಗಳನ್ನು ಬಲೆಗೆ ಕೆಡವಿಕೊಳ್ಳಲು ಹವಣಿಸುತ್ತಿದ್ದ ಅಮೆರಿಕದ ಪ್ರಜಾಪ್ರಭುತ್ವವಾದಿ ನಟನೆಗಳ ಮುಖವಾಡವನ್ನು ಕಿತ್ತೆಸೆದು ಸ್ಟಾಲಿನ್ ಅವರು ಅಮೆರಿಕದ ಸಾಮ್ರಾಜ್ಯಶಾಹಿಯ ಜಗತ್ ಸ್ವರೂಪವನ್ನು ನಿರ್ಭಯವಾಗಿ ಹೊರಗೆಡವಿದರು.

ಕಾರ್ಮಿಕ ಅಂತರರಾಷ್ಟ್ರೀಯತೆಯ ಆಧಾರದ ಮೇಲೆ ಕಮ್ಯುನಿಸ್ಟ್ ಪಕ್ಷಗಳ ನಡುವೆ ಹೊಸ ಅಂತರರಾಷ್ಟ್ರೀಯ ಸೌಹಾರ್ದ ಸಹಕಾರಗಳು ಸ್ಥಾಪನೆಯಾಗಲು ಸ್ಟಾಲಿನ್ ಶ್ರಮಿಸಿದರು. ಕಮ್ಯುನಿಸ್ಟ್ ಪಕ್ಷಗಳ ಒಳಗೆ ಬೆಳೆಯುತ್ತಿರುವ ಬಂಡವಾಳಶಾಹಿ ರಾಷ್ಟ್ರವಾದಿ ಪ್ರವೃತ್ತಿಗಳ ಬಗ್ಗೆಯೂ ಎಚ್ಚರಿಕೆ ಕೊಟ್ಟಿದ್ದರು. ಸೋವಿಯತ್ ಒಕ್ಕೂಟದೊಳಗೆ, ಸಿದ್ಧಾಂತ, ಮಾರ್ಕ್ಸ್‌ವಾದಿ ಅರ್ಥಶಾಸ್ತ್ರ, ರಾಜಕೀಯ, ತತ್ವಶಾಸ್ತ್ರ, ಇವುಗಳಲ್ಲಿ ಬೆಳೆಯುತ್ತಿರುವ ಪರಿಷ್ಕರಣವಾದಿ ಮತ್ತು ಉದಾರವಾದಿ ಪ್ರವೃತ್ತಿಗಳ ವಿರುದ್ಧ ಹೋರಾಡಬೇಕೆಂದು ಪಕ್ಷಕ್ಕೆ ಕರೆಕೊಟ್ಟರು. ಎಲ್ಲ ಕ್ಷೇತ್ರಗಳಲ್ಲೂ ನುಸುಳುತ್ತಿರುವ ಬಂಡವಾಳಶಾಹಿ ಸಿದ್ಧಾಂತಗಳ ವಿರುದ್ಧ ಹೋರಾಡಬೇಕೆಂದು ಸದಸ್ಯರಿಗೆ ಸ್ಟಾಲಿನ್ ಕರೆಕೊಟ್ಟರು. ಜಗತ್ತಿನ ವ್ಯವಹಾರಗಳ ಬಗ್ಗೆ ಅನೇಕ ಕಮ್ಯುನಿಸ್ಟ್ ಪಕ್ಷಗಳು ಒಂದೇ ದೃಷ್ಟಿಕೋನ ಬೆಳೆಸಿಕೊಳ್ಳಲು ವಾರ್ತಾ ಕೇಂದ್ರದ ರಚನೆಯ ಮುಖಾಂತರ ಶ್ರಮಿಸಿದರು.

ಲೆನಿನ್‌ವಾದದ ಪರವಾಗಿ ಸ್ಟಾಲಿನ್ ಹೋರಾಟ ನಡೆಸದೆ ಇದ್ದಿದ್ದರೆ ಮತ್ತು ಅವರ ಕೊಡುಗೆ ನೀಡದೆ ಇದ್ದಿದ್ದರೆ, ವಿಶ್ವಕಮ್ಯುನಿಸ್ಟ್ ಚಳುವಳಿಗೆ ಅನೇಕ ಮುಖ್ಯ ಹೆಜ್ಜೆಗಳು ತಪ್ಪಿಹೋಗಿ ಅನಗತ್ಯ ಸೋಲುಗಳನ್ನು ಅದು ಎದುರಿಸಬೇಕಾಗಿರುತ್ತಿತ್ತು. ಈ ಕಾರಣಕ್ಕಾಗಿಯೇ, ಸ್ಟಾಲಿನ್ನರ ಸಮಕಾಲೀನ ಪರಿಷ್ಕರಣವಾದಿಗಳು ಮತ್ತು ಸುಧಾರಣವಾದಿಗಳು, ಅವರ ಇವತ್ತಿನ ಉತ್ತರಾಧಿಕಾರಿಗಳು, ಯುರೋಕಮ್ಯುನಿಸ್ಟರು ಮತ್ತು ಆಧುನಿಕ ಪರಿಷ್ಕರಣವಾದಿಗಳು ಸ್ಟಾಲಿನ್ನರ ಹೆಸರನ್ನು ದ್ವೇಷಿಸುತ್ತಾರೆ. ಸ್ಟಾಲಿನ್ ಕೊನೆಗಾಲದಲ್ಲಿ ಮಾಡಿದ ಕೆಲವು ತೀವ್ರ ತಪ್ಪುಗಳನ್ನೇ ಮುಂದುಮಾಡಿ ಅವರ ವ್ಯಕ್ತಿತ್ವವನ್ನು ಅಂದಗೆಡಿಸಲು ಯತ್ನಿಸುತ್ತಾರೆ. ಲೆನಿನ್‌ವಾದದ ಪರವಾಗಿ ಸ್ಟಾಲಿನ್ ನೀಡಿದ ಎಲ್ಲ ಕೊಡುಗೆಗಳನ್ನು ವಿವರಿಸುವುದಕ್ಕೆ ಸಾಧ್ಯವಿಲ್ಲದಿದ್ದರೂ ಕೆಲವು ಅತ್ಯದ್ಭುತವಾದುವನ್ನು ಇಲ್ಲಿ ಹೇಳಲೇಬೇಕು.

ಕಾರ್ಮಿಕರ ಸಾರ್ವಭೌಮತ್ವ :

"ಜಾರನ ವಿರುದ್ಧ ನಡೆಸುವ ಕ್ರಾಂತಿಯಲ್ಲಿ, ಬಂಡವಾಳಶಾಹಿಯ ವಿರುದ್ಧ ನಡೆಸುವ ಕ್ರಾಂತಿಯಲ್ಲಿ, ಕಾರ್ಮಿಕರ ಮುಖಂಡತ್ವದ ಪ್ರಶ್ನೆ"ಯ ಬಗ್ಗೆ ಇದ್ದ ಲೆನಿನ್‌ರ ಒತ್ತಾಯವನ್ನು ಸ್ಟಾಲಿನ್ ದೃಢವಾಗಿ ಬೆಂಬಲಿಸುತ್ತಿದ್ದರು.

"ಕಾರ್ಮಿಕ ಸಾರ್ವಭೌಮತ್ವದ ಕಲ್ಪನೆಯ ಮುಖ್ಯ ರೇಖೆಗಳನ್ನು ಮಾರ್ಕ್ಸ್, ಎಂಗೆಲ್ಸ್, ಒದಗಿಸಿದರು. ಈ ಮೂಲರೇಖೆಗಳನ್ನು ಒಂದು ಸೌಹಾರ್ದಯುತ ವ್ಯವಸ್ಥೆಯಾಗಿ, ಜಾರ್‌ವಾದ ಮತ್ತು ಬಂಡವಾಳವಾದವನ್ನು ಕಿತ್ತೊಗೆಯುವುದರಲ್ಲಿ, ಹಳ್ಳಿ ನಗರಗಳಲ್ಲಿ ದುಡಿಯುವ ಜನತೆ ನಾಯಕತ್ವವಹಿಸುವ ವ್ಯವಸ್ಥೆಯಾಗಿ, ಕಾರ್ಮಿಕ ಸರ್ವಾಧಿಕಾರದಡಿಯಲ್ಲಿ ಸಮಾಜವಾದವನ್ನು ನಿರ್ಮಿಸುವ ವ್ಯವಸ್ಥೆಯಾಗಿ ರೂಪಿಸಿದ್ದು ಲೆನಿನ್." (1927 ರಲ್ಲಿ ಪ್ರಥಮ ಅಮೆರಿಕಾ ಕಾರ್ಮಿಕ ನಿಯೋಗದೊಡನೆ ಸಂದರ್ಶನ)

ಕಾರ್ಮಿಕ ಸರ್ವಾಧಿಕಾರದ ಕಲ್ಪನೆಯ ಬಗ್ಗೆ ಲೆನಿನ್ ಇತ್ತ ಕೊಡುಗೆಯನ್ನು ಮತ್ತಷ್ಟು ವಿಸ್ತರಿಸಿದ್ದು ಸ್ಟಾಲಿನ್. ಈ ಲೆನಿನ್ ಕೊಡುಗೆಯನ್ನು ಅರ್ಥಮಾಡಿಕೊಳ್ಳದೆ ಇದ್ದಿದ್ದರೆ, ರಷ್ಯದಲ್ಲಿ ಕಾರ್ಮಿಕ ಸರ್ವಾಧಿಕಾರವನ್ನು ದೃಢಪಡಿಸಲು ಮತ್ತು ಸಮಾಜವಾದವನ್ನು ಕಟ್ಟಲು ಆಗುತ್ತಿರಲಿಲ್ಲ; ಕಾರ್ಮಿಕ ಆಡಳಿತಕ್ಕೆ ಬಹುಸಂಖ್ಯಾತ ರೈತರ ಬೆಂಬಲ ಪಡೆಯಲೂ ಆಗುತ್ತಿರಲಿಲ್ಲ.

ಕಾರ್ಮಿಕ ಸರ್ವಾಧಿಕಾರ :

"ಈ ಕ್ಷೇತ್ರದಲ್ಲಿ ಲೆನಿನ್‌ರ ಮುಖ್ಯ ಕೊಡುಗೆ ಎಂದರೆ-

a) ಪ್ಯಾರಿಸ್ ಕಮ್ಯೂನ್ ಮತ್ತು ರಷ್ಯಾಕ್ರಾಂತಿಗಳ ಅನುಭವವನ್ನು ಉಪಯೋಗಿಸಿಕೊಂಡು, ಕಾರ್ಮಿಕ ಸರ್ವಾಧಿಕಾರಕ್ಕೆ ಸೋವಿಯತ್ ವ್ಯವಸ್ಥೆಯೇ ಉತ್ತಮ ಆಡಳಿತ ಸ್ವರೂಪವೆಂಬುದನ್ನು ಕಂಡುಹಿಡಿದರು.

b) ಕಾರ್ಮಿಕ ಸರ್ವಾಧಿಕಾರದ ಸೂತ್ರವನ್ನು ಅವರು ಕಾರ್ಮಿಕರ ಹಿತೈಷಿಗಳ ದೃಷ್ಟಿಕೋನದಿಂದ ವಿವರಿಸಿದರು. ಕಾರ್ಮಿಕರು ನಾಯಕರು ಮತ್ತು ಕಾರ್ಮಿಕೇತರ ಶೋಷಿತ ಜನತೆ (ರೈತರು ಇತ್ಯಾದಿ) ಹಿಂಬಾಲಕರಾಗಿ ಇರುವ ಒಂದು ವಿಶೇಷ ಸ್ವರೂಪದ ವರ್ಗ ಮೈತ್ರಿ ಎಂದು ಅವರು ವಿವರಿಸಿದರು.

c) ವರ್ಗಸಮಾಜದಲ್ಲಿ ಕಾರ್ಮಿಕ ಸರ್ವಾಧಿಕಾರವೇ ಅತ್ಯುತ್ತಮ ಮಾದರಿಯ ಪ್ರಜಾಪ್ರಭುತ್ವ ಎಂದು ಅಲ್ಪಸಂಖ್ಯಾತರ (ಶೋಷಕರ) ಹಿತಾಸಕ್ತಿಗಳನ್ನು ವ್ಯಕ್ತಮಾಡುವ ಬಂಡವಾಳಶಾಹಿ ಪ್ರಜಾಪ್ರಭುತ್ವದ ಹಾಗಲ್ಲದೆ ಬಹುಸಂಖ್ಯಾತರ (ಶೋಷಿತರ) ಹಿತಾಸಕ್ತಿಗಳನ್ನು ವ್ಯಕ್ತಪಡಿಸುವ ಕಾರ್ಮಿಕ ಪ್ರಜಾಪ್ರಭುತ್ವವೇ ಉತ್ತಮ ಎಂದು ಅವರು ವಿವರಿಸಿದರು" (ಪ್ರಥಮ ಅಮೆರಿಕಾ ಕಾರ್ಮಿಕ ನಿಯೋಗದ ಜೊತೆ ಸಂದರ್ಶನ). ರಷ್ಯದಂಥ ರೈತ ಬಹುಸಂಖ್ಯಾತ ದೇಶದಲ್ಲಿ ಇಂಥ ಸ್ವರೂಪದ ಕಾರ್ಮಿಕ ಸರ್ವಾಧಿಕಾರ ಸಫಲವಾಗುವುದಿಲ್ಲ, ಅದು ಪ್ರಜಾಪ್ರಭುತ್ವವನ್ನು ಅಲ್ಲಗಳೆದ ಹಾಗೆ ಎಂಬ ಉಗ್ರವಾದಕ್ಕೆ ಇದು ಪಕ್ಕಾಯಿತು.

ಕಮ್ಯುನಿಸ್ಟ್ ಪಕ್ಷ :

ಕಮ್ಯುನಿಸ್ಟ್ ಪಕ್ಷದ ಬಗ್ಗೆ ಲೆನಿನ್ ಬೋಧನೆಯನ್ನು ಕೂಡ ಸ್ಟಾಲಿನ್ ತುಂಬ ಸರಿಯಾಗಿ ಅರ್ಥೈಸಿಕೊಂಡರು. "a) ಕಾರ್ಮಿಕ ಸಂಸ್ಥೆಗಳ ಇತರ ರೂಪಗಳಿಗಿಂತ (ಟ್ರೇಡ್ ಯೂನಿಯನ್, ಸಹಕಾರಿಗಳು, ರಾಜ್ಯವ್ಯವಸ್ಥೆ) ಪಕ್ಷವೇ ಕಾರ್ಮಿಕರ ವರ್ಗಸಂಘಟನೆಯ ಅತ್ಯುನ್ನತ ರೂಪ. ಈ ರೂಪಗಳು ಪಕ್ಷದ ಅಧೀನದಲ್ಲಿ ಇರುತ್ತವೆ.

b) ಕಾರ್ಮಿಕ ಸರ್ವಾಧಿಕಾರದ ಮಾರ್ಗದರ್ಶಿ ಶಕ್ತಿಯಾಗಿರುವ ಪಕ್ಷದ ಮುಖಾಂತರವೇ ಕಾರ್ಮಿಕ ಸರ್ವಾಧಿಕಾರವನ್ನು ಜಾರಿಗೆ ತರಬಹುದು.

c) ಇತರ ಪಕ್ಷಗಳೊಡನೆ ನಾಯಕತ್ವವನ್ನು ಹಂಚಿಕೊಳ್ಳದ ಮತ್ತು ಹಂಚಿಕೊಳ್ಳಬಾರದ ಕಮ್ಯುನಿಸ್ಟ್ ಪಕ್ಷದಂಥ ಒಂದೇ ಒಂದು ಪಕ್ಷ ನಾಯಕತ್ವವಹಿಸಿದಾಗ ಮಾತ್ರ ಕಾರ್ಮಿಕ ಸರ್ವಾಧಿಕಾರ ಸಂಪೂರ್ಣವಾಗುತ್ತದೆ.

d) ಪಕ್ಷದೊಳಗೆ ಉಕ್ಕಿನಂಥ ಶಿಸ್ತು ಇಲ್ಲದಿದ್ದರೆ, ಕಾರ್ಮಿಕ ಸರ್ವಾಧಿಕಾರದ ಗುರಿಗಳಾದ, ಶೋಷಕರ ದಮನ ಮತ್ತು ವರ್ಗಸಮಾಜವನ್ನು ಸಮಾಜವಾದಿ ಸಮಾಜವಾಗಿ ಬದಲಾವಣೆ, ಇವುಗಳನ್ನು ಪೂರೈಸಲಾಗುವುದಿಲ್ಲ." (ಪ್ರಥಮ ಅಮೆರಿಕಾ ಕಾರ್ಮಿಕ ನಿಯೋಗದ ಜೊತೆ ಸಂದರ್ಶನ)

ಪಕ್ಷದ ಲೆನಿನ್‌ವಾದಿ ಅಗತ್ಯಗಳನ್ನು ಮನಗಂಡನಂತರ ಸ್ಟಾಲಿನ್ನರು ಪಕ್ಷದ ಬೋಲ್ಶೆವೀಕರಣ ನಡೆಸಲು ಕೆಲವು ನಿಯಮಗಳನ್ನು ರೂಪಿಸಿದರು. ಪಕ್ಷದ ಸಂಘಟನೆಯ ಬಗ್ಗೆ ಈಗತಾನೆ ಚರ್ಚೆಯನ್ನು ಮುಗಿಸಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಇದು ತುಂಬಾ ಪ್ರಯೋಜನಕಾರಿಯಾಗಿದೆ.

ಪಕ್ಷದ ಬೋಲ್ಶೆವೀಕರಣ (Bolshevisation) :

"ಬೋಲ್ಶೆವೀಕರಣವನ್ನು ಸಾಧಿಸಲು ಕೆಲವು ಮೂಲಭೂತ ನಿಯಮಗಳನ್ನು ಅನುಸರಿಸಬೇಕು. ಇಲ್ಲದಿದ್ದರೆ ಕಮ್ಯುನಿಸ್ಟ್ ಪಕ್ಷದ ಬೋಲ್ಶೆವೀಕರಣ ಸಾಧ್ಯವಿಲ್ಲ.

1. ಸಮಾಜವಾದಿ ಪ್ರಜಾಪ್ರಭುತ್ವವಾದಿ ಪಕ್ಷವು ಭಾವಿಸಿಕೊಂಡಿರುವ ಹಾಗೆ ಕಮ್ಯುನಿಸ್ಟ್ ಪಕ್ಷವು ಸಂಸತ್ತಿನ ಚುನಾಯಿತ ವ್ಯವಸ್ಥೆಗೆ ತಾನೊಂದು ಅನುಬಂಧವೆಂದು ಭಾವಿಸಿಕೊಳ್ಳಬಾರದು. ಕೆಲವು ಅರಾಜಕತಾವಾದಿ-ಸಿಂಡಿಕೇಟ್‌ವಾದಿ ಅಂಶಗಳು ವಾದಿಸುವ ಹಾಗೆ ಅದು ಟ್ರೇಡ್‌ಯೂನಿಯನ್‌ಗಳಿಗೆ ಅನಗತ್ಯ ಜೊತೆಗಾರನೆಂದೂ ಭಾವಿಸಿಕೊಳ್ಳಬಾರದು. ಕಾರ್ಮಿಕರ ಅತ್ಯುನ್ನತ ಸ್ವರೂಪದ ವರ್ಗಸಂಸ್ಥೆಯನ್ನಾಗಿ ಭಾವಿಸಿಕೊಂಡು, ಟ್ರೇಡ್‌ಯೂನಿಯನ್‌ಗಳಿಂದ ಹಿಡಿದು ಸಂಸತ್ತಿನಲ್ಲಿರುವ ಪಕ್ಷದ ಗುಂಪುಗಳವರೆಗಿನ ಎಲ್ಲ ಕಾರ್ಮಿಕ ಸಂಘಟನೆಗಳ ನಾಯಕತ್ವವನ್ನು ಪಕ್ಷವೇ ವಹಿಸಿಕೊಳ್ಳಬೇಕು.

2. ಕ್ರಾಂತಿಕಾರಿ ಕಾರ್ಯಾಚರಣೆ ಜೊತೆಗೆ ಅವಿನಾಸಂಬಂಧವನ್ನು ಹೊಂದಿರುವ ಮಾರ್ಕ್ಸ್‌ವಾದದ ಕ್ರಾಂತಿಕಾರಿ ಸಿದ್ಧಾಂತವನ್ನು ಪಕ್ಷವೂ ಅದರ ನಾಯಕ ಅಂಶಗಳೂ ಸಂಪೂರ್ಣವಾಗಿ ಕರಗತ ಮಾಡಿಕೊಳ್ಳಬೇಕು.

3. ಸಿದ್ಧಸೂತ್ರಗಳು ಮತ್ತು ಚಾರಿತ್ರಿಕ ಹೇಳಿಕೆಗಳ ಆಧಾರದ ಮೇಲೆ ಪಕ್ಷವು ಘೋಷಣೆಗಳು ಮತ್ತು ಆದೇಶಗಳನ್ನು ರೂಪಿಸಬಾರದು. ಕ್ರಾಂತಿಕಾರಿ ಚಳುವಳಿಯ ಆಂತರಿಕ ಮತ್ತು ಅಂತರರಾಷ್ಟ್ರೀಯ ಸ್ಥಿತಿಗತಿಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಇವನ್ನು ಮಾಡಬೇಕು. ಇತರ ಎಲ್ಲ ದೇಶಗಳ ಕ್ರಾಂತಿಗಳ ಅನುಭವವನ್ನು ಅದು ದೆ ಪರಿಗಣಿಸಬೇಕು.

4. ಜನತೆಯ ಕ್ರಾಂತಿಕಾರಿ ಹೋರಾಟದ ಚೌಕಟ್ಟಿನೊಳಗೆ ಈ ಘೋಷಣೆಗಳ ಸರಿತಪ್ಪುಗಳನ್ನು ಪಕ್ಷವು ಪರೀಕ್ಷಿಸಬೇಕು.

5. ಪಕ್ಷದ ಸಂಪೂರ್ಣ ಕೆಲಸಕಾರ್ಯಗಳನ್ನು ಹೊಸ ಕ್ರಾಂತಿಕಾರಿ ದಾರಿಯಲ್ಲಿ ಸಂಘಟಿಸಬೇಕು. ಪಕ್ಷವು ಕೈಗೊಳ್ಳುವ ಪ್ರತಿಯೊಂದು ಹೆಜ್ಜೆ, ಪ್ರತಿಯೊಂದು ಕ್ರಿಯೆಯೂ ಜನತೆಯನ್ನು ಕ್ರಾಂತಿಕಾರಿಗಳನ್ನಾಗಿ ಮಾಡುವುದಕ್ಕೆ ಬದ್ಧವಾಗಬೇಕು; ಕಾರ್ಮಿಕ ವರ್ಗದ ಜನಸಮುದಾಯವನ್ನು ಕ್ರಾಂತಿಕಾರಿ ಚೈತನ್ಯದೊಡನೆ ತರಬೇತಿ ಮತ್ತು ಶಿಕ್ಷಣ ನೀಡುವಂತಿರಬೇಕು.

6. ಪಕ್ಷವು ತನ್ನ ಕೆಲಸಕಾರ್ಯಗಳಲ್ಲಿ ನೀತಿನಿಯಮಗಳಿಗೆ ತೀವ್ರವಾಗಿ ಬದ್ಧವಾಗಿರಬೇಕು (ಇದನ್ನು ಗುಂಪುಗಾರಿಕೆ ಎಂದು ತಪ್ಪು ತಿಳಿಯಬಾರದು) ಜನತೆಯೊಡನೆ ಪಕ್ಷವು ಗರಿಷ್ಠಪ್ರಮಾಣದ ಸಂಬಂಧ, ಸ್ನೇಹಗಳನ್ನು ಹೊಂದಿರಬೇಕು (ಇದನ್ನು ಬಾಲಬಡುಕುತನ ಎಂದು ತಪ್ಪು ತಿಳಿಯಬಾರದು!). ಇಲ್ಲದಿದ್ದರೆ ಜನಸಮುದಾಯಕ್ಕೆ ಬೋಧಿಸಲು ಮಾತ್ರವಲ್ಲದೆ ಅದರಿಂದ ಪಾಠ ಕಲಿಯಲೂ ಕೂಡ ಪಕ್ಷಕ್ಕೆ ಸಾಧ್ಯವಾಗುವುದಿಲ್ಲ. ಜನತೆಯ ನಾಯಕತ್ವವಹಿಸಿ, ಅವರನ್ನು ಅವರದೇ ಆದ ಮಟ್ಟಕ್ಕೆ ಏರಿಸಿ, ಅವರ ದನಿಯಲ್ಲಿ ಮಾತನಾಡುವ ಮತ್ತು ಅವರ ತುರ್ತು ಅಗತ್ಯಗಳನ್ನು ಊಹಿಸುವ ಕೆಲಸವೂ ಪಕ್ಷದಿಂದ ಸಾಧ್ಯವಾಗುವುದಿಲ್ಲ.

7. ಪಕ್ಷವು ತನ್ನ ಕೆಲಸಕಾರ್ಯಗಳಲ್ಲಿ ಎಂದೂ ರಾಜಿ ಮಾಡಿಕೊಳ್ಳದೆ ಇರುವ ಕ್ರಾಂತಿ ಚೈತನ್ಯವೊಂದನ್ನು (ಇದನ್ನು ಕ್ರಾಂತಿಕಾರಿ ಸಾಹಸವಾದ ಎಂದು ತಪ್ಪು ತಿಳಿಯಬಾರದು!) ಗರಿಷ್ಠಪ್ರಮಾಣದ ಹೊಂದಿಕೊಳ್ಳುವಿಕೆ ಮತ್ತು ನಿಯಂತ್ರಣ ಶಕ್ತಿಯ ಜೊತೆಗೂಡಿಸಬೇಕು (ಇದನ್ನು ಅವಕಾಶವಾದವೆಂದು ತಪ್ಪು ತಿಳಿಯಬಾರದು). ಹೀಗೆ ಮಾಡದಿದ್ದರೆ, ಮೂಲಭೂತ ಕಾರ್ಮಿಕರ ದಿನನಿತ್ಯದ ಹಿತಾಸಕ್ತಿಗಳ ಜೊತೆ ಕಾರ್ಮಿಕ ಕ್ರಾಂತಿಯ ಮೂಲಭೂತ ಆಶಯಗಳನ್ನು ಹೊಂದಿಸುವುದರಲ್ಲಿ ಮತ್ತು ತನ್ನ ಕೆಲಸಕಾರ್ಯವನ್ನು ನ್ಯಾಯಬದ್ಧ ಮತ್ತು ನ್ಯಾಯಬಾಹಿರ ಹೋರಾಟಗಳ ಜೊತೆ ಕೂಡಿಸುವುದರಲ್ಲಿ ಪಕ್ಷವು ಅಸಮರ್ಥವಾಗುತ್ತದೆ.

8. ಪಕ್ಷವು ತನ್ನ ತಪ್ಪುಗಳನ್ನು ಮುಚ್ಚಿಟ್ಟುಕೊಳ್ಳಬಾರದು. ವಿಮರ್ಶೆಗೆ ಹೆದರಬಾರದು. ತನ್ನದೇ ತಪ್ಪುಗಳಿಂದ ಪಾಠ ಕಲಿತು ತನ್ನ ಕಾರ್ಯಕರ್ತರಿಗೆ ಶಿಕ್ಷಣ ನೀಡಿ ಅವರನ್ನು ಸುಧಾರಿಸಬೇಕು.

9. ಪಕ್ಷವು ತನ್ನ ಮುಖ್ಯ ನಾಯಕ ಗುಂಪಿಗೆ ಅತ್ಯುತ್ತಮ ಪ್ರಗತಿಶೀಲ ಹೋರಾಟಗಾರರನ್ನೇ ನೇಮಿಸಿಕೊಳ್ಳಬೇಕು. ಇವರು ಕ್ರಾಂತಿಕಾರಿ ಕಾರ್ಮಿಕ ವರ್ಗದ ಆಶಯಗಳ ನಿಜವಾದ ವಕ್ತಾರರಾಗಿರಬೇಕು. ಮತ್ತು ಕಾರ್ಮಿಕ ಕ್ರಾಂತಿಯ ನಿಜವಾದ ನಾಯಕರಾಗಲು ಸಾಕಷ್ಟು ಅನುಭವವುಳ್ಳವರನ್ನು ಮತ್ತು ಲೆನಿನ್‌ವಾದದ ಕಾರ್ಯತಂತ್ರವನ್ನು ಅನ್ವಯಿಸಲು ಸಮರ್ಥರಾದವರನ್ನು ಈ ಸ್ಥಾನಗಳಿಗೆ ನೇಮಿಸಿಕೊಳ್ಳಬೇಕು.

10. ತನ್ನ ಸಂಘಟನೆಯ ಸಾಮಾಜಿಕ ರಚನೆಯನ್ನು ಪಕ್ಷವು ಕ್ರಮಬದ್ಧವಾಗಿ ಸುಧಾರಿಸಬೇಕು. ಅತ್ಯಂತ

ಐಕ್ಯತೆಯನ್ನು ಸಾಧಿಸುವ ಸಲುವಾಗಿ ಭ್ರಷ್ಟ ಅವಕಾಶವಾದಿ ಅಂಶಗಳನ್ನು ಪಕ್ಷದಿಂದ ಕಿತ್ತೊಗೆಯಬೇಕು.

11. ಸೈದ್ಧಾಂತಿಕ ಐಕ್ಯತೆ, ಚಳುವಳಿಯ ಧ್ಯೇಯಗಳ ಬಗ್ಗೆ ಸ್ಪಷ್ಟತೆ, ಕಾರ್ಯಾಚರಣೆಯ ಐಕ್ಯತೆ ಮತ್ತು ಪಕ್ಷದ ಸದಸ್ಯತ್ವ ಸಮುದಾಯಕ್ಕೆ ಗುರಿಗಳ ಬಗ್ಗೆ ತಿಳುವಳಿಕೆ-ಇವುಗಳ ಆಧಾರದ ಮೇಲೆ ಪಕ್ಷವು ಉಕ್ಕುಸದೃಶ ಕಾರ್ಮಿಕ ಶಿಸ್ತನ್ನು ಸಾಧಿಸಬೇಕು.

12. ತನ್ನ ನಿರ್ಣಯಗಳು ಮತ್ತು ಆದೇಶಗಳು ಕಾರ್ಯಗತವಾಗುವುದರ ಬಗ್ಗೆ ಪಕ್ಷವು ಕ್ರಮಬದ್ಧ ಪರಿಶೀಲನೆ ನಡೆಸಬೇಕು. ಇಲ್ಲದಿದ್ದರೆ ಈ ನಿರ್ಣಯಗಳು ಮತ್ತು ಆದೇಶಗಳು ಹುಸಿ ಭರವಸೆಗಳಾಗುವ ಅಪಾಯವಿರುತ್ತದೆ. ಇದರಿಂದ ವಿಶಾಲ ಕಾರ್ಮಿಕ ಜನಸಮೂಹದ ನಡುವೆ ಪಕ್ಷದ ಬಗ್ಗೆ ವಿಶ್ವಾಸ ಕುಗ್ಗಿಹೋಗುತ್ತದೆ.

"ಇವುಗಳು ಮತ್ತು ಇಂಥ ನಿಯಮಗಳು ಇಲ್ಲವಾದರೆ ಬೋಲ್ಶೆವೀಕರಣ ಬರೇ ಒಂದು ಖಾಲಿ ಶಬ್ದವಾಗಿಬಿಡುತ್ತದೆ" (ಜೆ. ಸ್ಟಾಲಿನ್, "ಆಯ್ದ ಸಂದರ್ಶನಗಳು" ಪು. 5-6).

> ಮಾನವ ಜಾತಿಗೋಸ್ಕರ ತಾನು ಮಾಡಿದ ಮಹೋನ್ನತವಾದ ಸೇವೆಗೋಸ್ಕರ ತನ್ನ ಜೀವಿತದ ಕಾಲದಲ್ಲಿ, ಪ್ರಪಂಚದ ಬಹುಸಂಖ್ಯಾತ ಜನರಿಗೆ ಪರಿಚಯವಾಗಿ, ಪ್ರಶಂಸಿಸಲ್ಪಟ್ಟವರು ಮಹಾಪುರುಷ ಸ್ಟಾಲಿನ್ ಒಬ್ಬರೆ!
>
> —ರಜನಿ ಪಾಮಿದತ್
>
> "ಕ್ರಾಂತಿಗೆ ಪರಿಸ್ಥಿತಿ ತಕ್ಕದ್ದಾಗಿರುವಾಗ, ಬೂರ್ಜ್ವಾ ಪಾಲನೆ ಬುಡಸಮೇತ ಅಲ್ಲಾಡುತ್ತಿರುವಾಗ, ಸಹಾ, ಕ್ರಾಂತಿಗೆ ಜಯ ಲಭಿಸದೇ ಇರುವ ಸಂದರ್ಭ ಉಂಟು. ಜನರನ್ನು ಸರಿಯಾದ ದಾರಿಯಲ್ಲಿ ನಡೆಸುವುದಕ್ಕೂ, ಅಧಿಕಾರವನ್ನು ಹಸ್ತಗತ ಮಾಡಿಕೊಳ್ಳುವುದಕ್ಕೂ, ಸಾಕಾದಷ್ಟು ಬಲವ ಬಂಡವಾಳವಿರುವ ಕ್ರಾಂತಿಕಾರಕ ಕಾರ್ಮಿಕವರ್ಗ ಇಲ್ಲದೇ ಇರುವುದೇ ಇದಕ್ಕೆ ಕಾರಣ. ಇಂತಹ ಘಟನೆಗಳು ನಡೆಯಲಾರವು ಎಂದು ತಿಳಿದುಕೊಳ್ಳುವುದು ಮೂರ್ಖತನವಾಗುತ್ತದೆ".
>
> —ಸ್ಟಾಲಿನ್
> "ಲೆನಿನಿಸಂ ಸಮಸ್ಯೆಗಳು"ದಿಂದ

ದೌರ್ಬಲ್ಯಗಳು ಮತ್ತು ತಪ್ಪುಗಳು:

ಈ ದೈತ್ಯ ಚಾರಿತ್ರಿಕ ವ್ಯಕ್ತಿತ್ವದಲ್ಲಿ ತಪ್ಪುಗಳು, ದೌರ್ಬಲ್ಯಗಳು ಮತ್ತು ಕೆಲವೊಮ್ಮೆ ಲೆನಿನ್‌ವಾದಿ ಪದ್ಧತಿಗಳ ಮೀರುವಿಕೆಗಳು ಇಲ್ಲದೆ ಇರಲಿಲ್ಲ. ಅವರ ಸುತ್ತ ವ್ಯಕ್ತಿಪೂಜೆ ಬೆಳೆದುಕೊಂಡಿತು. ಸೋವಿಯತ್ ಕ್ರಾಂತಿಯ ಬಿಕ್ಕಟ್ಟಿನ ದಿನಗಳಲ್ಲಿ ಅವರು ನೀಡಿದ ವೈಯಕ್ತಿಕ ಕೊಡುಗೆಗೆ ವಿಪರೀತ ಪ್ರಾಮುಖ್ಯತೆ ಕೊಡಲಾಯಿತು. ಇವು ಅವರ ದೌರ್ಬಲ್ಯ ಮತ್ತು ಮೀರುವಿಕೆಗಳಿಗೆ ಸ್ಪಷ್ಟ ಉದಾಹರಣೆಗಳು. ಇದರಿಂದ ಸಮಾಜವಾದಿ ಪ್ರಜಾಪ್ರಭುತ್ವ ಮತ್ತು ಪಕ್ಷದ ಆಂತರಿಕ ಪ್ರಜಾಪ್ರಭುತ್ವದ ತತ್ವಗಳ ಮೀರುವಿಕೆಗೂ ದಾರಿಯಾಯಿತು.

ಉಗ್ರ ವರ್ಗಕದನದ ಪರಿಸ್ಥಿತಿಯ ನಡುವೆ ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದದ ನಿರ್ಮಾಣವಾಯಿತೆಂಬುದು ಗೊತ್ತಿರುವ ಸಂಗತಿ. ವಿಶ್ವದ ಸಾಮ್ರಾಜ್ಯಶಾಹಿಗಳು ಮತ್ತು ದೇಶೀಯ ಶೋಷಕ ವರ್ಗಗಳ ವಿರುದ್ಧ ಒಂದು ನಿರ್ದಯ ಹೋರಾಟವನ್ನು ಕಾರ್ಮಿಕ ಸರ್ವಾಧಿಕಾರ ನಡೆಸಬೇಕಿತ್ತು. ಈ ಪರಿಸ್ಥಿತಿಯಿಂದ ಪಕ್ಷದೊಳಗೆ ಮತ್ತು ದೇಶದೊಳಗೆ ಉಕ್ಕುಸದೃಶ ಶಿಸ್ತು ಮತ್ತು ಕೇಂದ್ರೀಕೃತ ನಾಯಕತ್ವಗಳನ್ನು ಜಾರಿಗೊಳಿಸಿ, ಸಮಾಜವಾದಿ ಮತ್ತು ಪಕ್ಷದ ಆಂತರಿಕ ಪ್ರಜಾಪ್ರಭುತ್ವದಲ್ಲಿ ಬಿಗಿಕ್ರಮಗಳನ್ನು ತರುವುದು ಅನಿವಾರ್ಯವಾಯಿತು. ಈ ಬಿಗಿಕ್ರಮಗಳು, ಅವು ಅಗತ್ಯವಾಗಿದ್ದ ಅವಧಿ ಮೀರಿದ ನಂತರವೂ ಮುಂದುವರೆಯಿತು. ಇದರಿಂದ ಪಕ್ಷದ ಜೀವನ ಪದ್ಧತಿಗಳ ಮತ್ತು ಲೆನಿನ್ ವಿವರಿಸಿದ ಸಾಮೂಹಿಕ ನಾಯಕತ್ವದ ತತ್ವಗಳ ಮೀರುವಿಕೆ ನಡೆಯಿತು. ಇದರ ಫಲವಾಗಿ, ಕೇಂದ್ರ ಸಮಿತಿಯ ಪ್ಲೀನರಿ ಸಭೆಗಳು ಮತ್ತು ಪಕ್ಷದ ಅಧಿವೇಶನಗಳು ಸರಿಯಾಗಿ ನಡೆಯದೆ, ಅನೇಕ ವರ್ಷಗಳು ನಿಂತುಹೋದವು. ಪಕ್ಷದ ಆಂತರಿಕ ಪ್ರಜಾಪ್ರಭುತ್ವ ಮತ್ತು ಸಾಮೂಹಿಕ ನಾಯಕತ್ವಕ್ಕೆ ಇದರಿಂದ ಅಪಾಯಕಾರಿ ಪೆಟ್ಟು ಬಿದ್ದಂತಾಯಿತು.

ಜನಸಮೂಹದ ಪಾತ್ರ ಮತ್ತು ಲೆನಿನ್‌ವಾದಿ ಬೋಲ್ಶೆವಿಕ್ ಪಕ್ಷದ ನೇತೃತ್ವ ಇಲ್ಲದೆ ಇದ್ದಿದ್ದರೆ ಸೋವಿಯತ್ ಜನತೆ ಸಾಧಿಸಿದ ಭಾರಿ ವಿಜಯಗಳು ಸಾಧ್ಯವಾಗುತ್ತಿರಲಿಲ್ಲವೆಂಬುದು ಸ್ಪಷ್ಟವಾಗಿದೆ. ಲೆನಿನ್ ಶಿಕ್ಷಿತ ಬೋಲ್ಶೆವಿಕ್ ಪಕ್ಷದ ಬೆಂಬಲವಿಲ್ಲದಿದ್ದರೆ ಸ್ಟಾಲಿನ್‌ರ ಚಾರಿತ್ರಿಕ ಕೊಡುಗೆ ಸಾಧ್ಯವಾಗುತ್ತಿರಲಿಲ್ಲ. ಚರಿತ್ರೆಯನ್ನು ನಿರ್ಮಿಸುವವರು ಜನತೆಯೇ ಎಂಬುದರ ಬಗ್ಗೆ ಮತ್ತು ಪಕ್ಷದ ಸಾಮೂಹಿಕ ನಾಯಕತ್ವ ಮತ್ತು ಕೇಂದ್ರ ಸಮಿತಿಯ ಪಾತ್ರದ ಮಹತ್ವಗಳ ಬಗ್ಗೆ ಸ್ಟಾಲಿನ್ ಸಾಕಷ್ಟು ಬರೆದಿದ್ದರೆಂಬುದೇನೋ ನಿಜ. ಆದರೆ ಅವರ ಜೀವನದ ಕೊನೆಯ ಭಾಗದಲ್ಲಿ ಅವರು ಈ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ತಿಳುವಳಿಕೆಯನ್ನು ಮೀರಿ ತಮ್ಮ ಸ್ವಂತ ವ್ಯಕ್ತಿತ್ವದ ಪೂಜೆಯ ಜನಪ್ರಿಯತೆಗೆ ಪೋಷಣೆಯಾಗುವಂತೆ ಮಾಡಿದರು. ಸ್ಟಾಲಿನ್‌ರ ಸಾಧನೆಗಳ ಬಗ್ಗೆ ಪ್ರಾಮಾಣಿಕ ಪ್ರಶಂಸೆಯನ್ನು ಹೊಂದಿದ್ದ ಅವರ ಕೇಂದ್ರ ಸಮಿತಿಯ ಸಹೋದ್ಯೋಗಿಗಳು ವಿಪರೀತ ಅಲಂಕಾರಿಕವಾದ ಮಾತುಗಳಲ್ಲಿ ಪ್ರಶಂಸೆ ಮಾಡಿದರು. ಇದುಕೂಡ ವ್ಯಕ್ತಿಪೂಜೆಯ ಬೆಳವಣಿಗೆಗೆ ಸಹಾಯ ಮಾಡಿತು.

ವ್ಯಕ್ತಿಪೂಜೆ, ಜನತೆಗೆ ಮತ್ತು ಪಕ್ಷಕ್ಕೆ ಬದಲು ವ್ಯಕ್ತಿಯ ಬಗ್ಗೆ ಹೇಳುವುದು, ಇವೆಲ್ಲಕ್ಕೂ ಮಾರ್ಕ್ಸ್‌ವಾದ-ಲೆನಿನ್‌ವಾದದಲ್ಲಿ ಸ್ಥಾನವಿಲ್ಲ. ಸ್ಟಾಲಿನ್‌ರಲ್ಲಿ ಈ ಕೊರತೆ ಇದ್ದುದರಿಂದ ಅವರ ಜೀವನದ ಕೊನೆಯ ಭಾಗದಲ್ಲಿ ಅನೇಕ ತಪ್ಪುಗಳಾದವು. ಕಾರ್ಮಿಕ ಪ್ರಜಾಪ್ರಭುತ್ವವನ್ನು ತೀವ್ರವಾಗಿ ಮೀರಲಾಯಿತು. ಬದಲಾದ ಪರಿಸ್ಥಿತಿಯಲ್ಲಿ ಅವುಗಳ ಅಗತ್ಯವಿಲ್ಲದಿದ್ದರೂ, ಸೈದ್ಧಾಂತಿಕ ಮತ್ತು ರಾಜಕೀಯ ಶತ್ರುಗಳ ಮೇಲೆ ಉಗ್ರವಾಗಿ ದಬ್ಬಾಳಿಕೆ ನಡೆಸಲಾಯಿತು. ಇದರ ಫಲವಾಗಿ ಅಸಂಖ್ಯಾತ ಮುಗ್ಧ ಜನರು ಅನಗತ್ಯ ನೋವುಗಳನ್ನು ಅನುಭವಿಸಿದರು ಮತ್ತು ಸ್ವಾತಂತ್ರ್ಯ ಕಳೆದುಕೊಂಡರು.

ಯುದ್ಧದ ಸಮಯದಲ್ಲಿ ರಾಜಕೀಯ ಲೆಕ್ಕಾಚಾರ ಮತ್ತು ತೀರ್ಪುಗಳ ವಿಚಾರದಲ್ಲಿ ಕೆಲವು ತಪ್ಪುಗಳು ನಡೆದವು. ಇದರಿಂದ ರಕ್ಷಣೆಗೆ ಹಾನಿಯಾಗಿ, ದುಬಾರಿ ಬಲಿಗಳನ್ನು ನೀಡಬೇಕಾಯಿತು.

ನೇತ್ಯಾತ್ಮಕ ದೃಷ್ಟಿಕೋನ:

ಸ್ಟಾಲಿನ್‌ರಂಥ ಅದ್ಭುತ ನಾಯಕನ ಬಗ್ಗೆ ಆಲೋಚಿಸುವಾಗ, ಈ ತಪ್ಪುಗಳಿಂದ ಅಗತ್ಯವಾದ ಪಾಠಗಳನ್ನು ಕಲಿಯುವುದು ಇಡೀ ಕಮ್ಯುನಿಸ್ಟ್ ಚಳುವಳಿಯ ಕರ್ತವ್ಯವಾಗಿತ್ತು. ಸ್ಟಾಲಿನ್‌ರ ಮಹಾನ್ ಸಾಧನೆಗಳನ್ನು ವಸ್ತುನಿಷ್ಠವಾಗಿ ಪರಿಗಣಿಸಿ, ಅವರ ಕೊರತೆಗಳನ್ನು, ಅವರೇ ದೃಢವಾಗಿ ನಂಬಿದ್ದ ಮಾರ್ಕ್ಸ್‌ವಾದ-ಲೆನಿನ್‌ವಾದದ ತತ್ವಗಳ ಬೆಳಕಿನಲ್ಲಿ ಪರೀಕ್ಷಿಸಬೇಕಾಗಿತ್ತು.

ಆದರೆ ದುರಾದೃಷ್ಟದಿಂದ, ಸೋವಿಯತ್ ಕಮ್ಯುನಿಸ್ಟ್ ಪಕ್ಷದ 20ನೇ ಅಧಿವೇಶನ ಮತ್ತು ಅದನ್ನು ಅನುಸರಿಸಿದ ವಿಶ್ವಕಮ್ಯುನಿಸ್ಟ್ ಚಳುವಳಿಯ ೨ ನೆ ದೇಶಗಳು ಸ್ಟಾಲಿನ್ನರ ಬಗ್ಗೆ ಸಂಪೂರ್ಣ ನೇತ್ಯಾತ್ಮಕವಾದ ಮತ್ತು ತಿರಸ್ಕಾರ ಪೂರ್ಣವಾದ ದೃಷ್ಟಿಕೋನ ದರು. ಇದರಿಂದ, ಸೋವಿಯತ್ ಪದ್ಧತಿಯ ನಿರಾಕರಣೆ, ಕಾರ್ಮಿಕ ಸರ್ವಾಧಿಕಾರದ ತಿರಸ್ಕಾರ, ಸೋವಿಯತ್ ಒಕ್ಕೂಟವನ್ನು ಎಂದೂ ಒಂದು ಸಮಾಜವಾದಿ ದೇಶ ಎಂದು ಒಪ್ಪಿಕೊಳ್ಳದಿದ್ದ ಟ್ರಾಟ್ಸ್ಕಿವಾದಿಗಳಿಗೆ ಮತ್ತು ಸಾಮ್ರಾಜ್ಯಶಾಹಿಗಳಿಗೆ ವಿಪರೀತ ಆಯುಧ ಸರಬರಾಜು ಇವೆಲ್ಲ ನಡೆದವು. ಇವು ಆಕಸ್ಮಿಕವಾಗಿ ನಡೆದದ್ದೇನಲ್ಲ. ಬಂಡವಾಳಶಾಹಿ ಪರಿಷ್ಕರಣವಾದಿ ವಿಚಾರಗಳ ಪ್ರಭಾವದಲ್ಲಿದ್ದವರು ಸ್ಟಾಲಿನ್‌ರ ತಪ್ಪುಗಳನ್ನು ಉಪಯೋಗಿಸಿಕೊಂಡರು. ಸ್ಟಾಲಿನ್‌ರ ಬಗ್ಗೆ ಇದ್ದ ತಿರಸ್ಕಾರದ ಜೊತೆಗೆ ಕ್ರಾಂತಿಯ ನಿರಾಕರಣೆಯಾಗಿ, ಅನೇಕ ಕಮ್ಯುನಿಸ್ಟ್ ಪಕ್ಷಗಳು ಸಮಾಜವಾದಕ್ಕೆ ಶಾಂತಿಯುತ ಸಂಸತ್ ದಾರಿಯನ್ನು ಹಿಡಿದದ್ದೂ ಆಕಸ್ಮಿಕವೇನಲ್ಲ. ನಂತರ ಕಾರ್ಮಿಕ ಸರ್ವಾಧಿಕಾರ ಮತ್ತು ಪಕ್ಷದ ನಾಯಕ ಪಾತ್ರದ ಬಗ್ಗೆ ಅನೇಕ ಕಮ್ಯುನಿಸ್ಟ್ ಪಕ್ಷಗಳು ಬಹಿರಂಗವಾಗಿ ಸವಾಲು ಹಾಕಿದ್ದೂ ಆಶ್ಚರ್ಯವೇನಲ್ಲ.

ಸ್ಟಾಲಿನ್‌ರ ಬಗೆಗಿನ ತಿರಸ್ಕಾರದಿಂದ ಕಮ್ಯುನಿಸ್ಟ್ ಚಳುವಳಿಗೆ ಅಪಾರ ಹಾನಿಯಾದದ್ದನ್ನು ಕೆಲವು ವರ್ಷಗಳಲ್ಲಿ ಸೋವಿಯತ್ ಒಕ್ಕೂಟ ಮನಗಂಡಿತು. 1959ರ ಸೋವಿಯತ್ ವಿಶ್ವಕೋಶದಲ್ಲಿ ಹೀಗೆ ಬರೆಯಲಾಯಿತು. "ಸಾಮ್ರಾಜ್ಯಶಾಹಿ ಪ್ರತಿಗಾಮಿಗಳು ತಾವೇ ಕಂಡುಹಿಡಿದು ನಡೆಸಿದ, ಸ್ಟಾಲಿನ್‌ವಾದದ ವಿರುದ್ಧದ ಪ್ರಚಾರವು, ನಿಜವಾಗಿ ಕ್ರಾಂತಿಕಾರಿ ಕೆಲಸಗಾರರ ಚಳುವಳಿಯ ವಿರುದ್ಧ ಮಾಡಿದ ಪ್ರಚಾರವಾಗಿದೆ." "ಸ್ಟಾಲಿನ್‌ವಾದದ ವಿರುದ್ಧ ಎದ್ದ ಪರಿಷ್ಕರಣವಾದವು, ಸತ್ವದಲ್ಲಿ ನಿಜವಾಗಿ ಮಾರ್ಕ್ಸ್‌ವಾದ-ಲೆನಿನ್‌ವಾದದ ಮೂಲಭೂತ ತತ್ವಗಳ ವಿರುದ್ಧ ನಡೆದ ಹೋರಾಟದ ಒಂದು ರೂಪವಾಗಿದೆ." ಇದನ್ನು ಚೆನ್ನಾಗಿ ಹೇಳಲಾಗಿದೆ. ಸ್ಟಾಲಿನ್‌ರ ವಿರುದ್ಧ ತಿರಸ್ಕಾರ ಹೋರಾಟವನ್ನು ಆರಂಭಿಸಿದ ಕಮ್ಯುನಿಸ್ಟ್ ಚಳುವಳಿಯ ಎಲ್ಲ ಪಾಲುದಾರರಿಗೂ ಇದು ಅನ್ವಯಿಸುತ್ತದೆ.

"ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯಲ್ಲಿ ಸ್ಟಾಲಿನ್‌ರು ದೀರ್ಘಕಾಲದಿಂದ ನಾಯಕಸ್ಥಾನವನ್ನು ಪಡೆದಿದ್ದಾರೆ. ಸೋವಿಯತ್ ದೇಶದಲ್ಲಿ ಬೃಹತ್ ಸಮಾಜವಾದಿ ಬದಲಾವಣೆಗಳನ್ನು ತರುವುದಕ್ಕೇ ಅವರ ಕೆಲಸಗಳೆಲ್ಲ ಸಂಬಂಧಿಸಿರುತ್ತವೆ. ಕಮ್ಯುನಿಸ್ಟ್ ಪಕ್ಷ ಮತ್ತು ಸೋವಿಯತ್ ಜನತೆ ಸ್ಟಾಲಿನ್‌ರನ್ನು ಸ್ಮರಿಸಿ ಗೌರವ ಸಲ್ಲಿಸುತ್ತಾರೆ. ಅವರ ಹೆಸರನ್ನು ಮಾರ್ಕ್ಸ್‌ವಾದ-ಲೆನಿನ್‌ವಾದದಿಂದ ಬೇರ್ಪಡಿಸಲಾಗುವುದಿಲ್ಲ. ಸ್ಟಾಲಿನ್ನರು ತಮ್ಮ ಜೀವನದ ಕೊನೆಯ ಅವಧಿಯಲ್ಲಿ ನಡೆಸಿದ ಕೆಲವು ತಪ್ಪುಗಳನ್ನು, ಪಕ್ಷ ಮತ್ತು ದೇಶದ ನಾಯಕರಾಗಿ ಅವರು ನಡೆಸಿದ ಎಲ್ಲ ವರ್ಷಗಳ ಚಟುವಟಿಕೆಗಳಿಗೂ ಅನ್ವಯಿಸುವುದು ಒಂದು ದೊಡ್ಡ ಚಾರಿತ್ರಿಕ ತಪ್ಪಾಗುತ್ತದೆ" ಎಂದು ಸೋವಿಯತ್ ವಿಶ್ವಕೋಶದ ಲೇಖನ ಸರಿಯಾಗಿ ಹೇಳುತ್ತದೆ.

ಸ್ಟಾಲಿನ್ನರ ದೇಹವನ್ನು ಅವರ ಸ್ಮಾರಕ ಮಂದಿರದಿಂದ ತೆಗೆದು ಆಳವಾಗಿ ಭೂಮಿಯಲ್ಲಿ ಹುಗಿಯಲು ಆತುರಪಟ್ಟವರು, ಸ್ಟಾಲಿನ್‌ರ ದನಿ ಮತ್ತೆ ಮಾತನಾಡುತ್ತದೆ, ಎಲ್ಲ ಕಾಲಗಳ ಈ ಮಹಾನ್ ಕ್ರಾಂತಿಕಾರಿಯನ್ನು ಜನತೆ ಮರೆಯುವುದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಲಿಲ್ಲ. ಸ್ಟಾಲಿನ್‌ರ ಸಾಧನೆಗಳು ಮಾರ್ಕ್ಸ್‌ವಾದ-ಲೆನಿನ್‌ವಾದದ, ಚರಿತ್ರೆಯ, ಬೋಲ್ಶೆವಿಕ್ ಪಕ್ಷದ, ಮತ್ತು ಸೋವಿಯತ್ ಜನತೆಯ ಸಾಧನೆಗಳು, ಅವುಗಳನ್ನು ಭೂಮಿಯೊಳಗೆ ಹುಗಿಯಲಾಗುವುದಿಲ್ಲ ಎಂಬುದನ್ನು ಅವರು ಮರೆತರು.

ಸ್ಟಾಲಿನ್ನರು ಎಲ್ಲ ತಪ್ಪುಗಳಿದ್ದೂ, ಅವರು ಲೆನಿನ್ನರ ಮಹಾನ್ ಶಿಷ್ಯ, ಒಬ್ಬ ಮಹಾ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಎಂದು ಎಲ್ಲ ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳು ಅವರ ಜನ್ಮದ ಶತಮಾನೋತ್ಸವವನ್ನು ಆಚರಿಸುತ್ತಾರೆ. ಮಾರ್ಕ್ಸ್, ಎಂಗೆಲ್ಸ್ ಮತ್ತು ಲೆನಿನ್‌ರಂಥ ಮೂರು ಮಹಾನ್ ಸ್ಥಾಪಕರ ನಂತರ ಸ್ಟಾಲಿನ್ನರ ಹೆಸರನ್ನು ಸದಾ ಸ್ಮರಿಸಲಾಗುತ್ತದೆ.

ಸಾಹಸಿ ಕ್ರಾಂತಿಕಾರಿ ಹೋರಾಟಗಳನ್ನು ನಡೆಸುವ, ಸಮಾಜವಾದವನ್ನು ಕಟ್ಟು ಕಾರ್ಮಿಕವರ್ಗವು, ಸ್ಟಾಲಿನ್ನರನ್ನು, ಎಲ್ಲ ರಂಗಗಳಲ್ಲಿ ವರ್ಗಶತ್ರುಗಳ ವಿರುದ್ಧ ಹೋರಾಡುವ ಕಾರ್ಮಿಕ ವರ್ಗದ ಬಿಚ್ಚುಗತ್ತಿ ಎಂದು ಸದಾಕಾಲ ಸ್ಮರಿಸುತ್ತದೆ.

ಸ್ಟಾಲಿನ್ನರ ಮರಣವನ್ನು ಕುರಿತು

ಕಾಂ. ಎ.ಕೆ.ಜಿ.ಯ ಸ್ಮೃತಿಗಳು

(ಸ್ಟಾಲಿನ್ ಶತಮಾನೋತ್ಸವ ವರ್ಷ)

(1952 ಅಕ್ಟೋಬರ್‌ನಲ್ಲಿ ನಡೆದ ಸೋವಿಯತ್ ಕಮ್ಯುನಿಸ್ಟ್ ಪಾರ್ಟಿಯ 19ನೇ ಮಹಾಸಭೆಗೆ ಭಾರತದ ಕಮ್ಯುನಿಸ್ಟ್ ನಾಯಕ ಕಾಂ. ಎ. ಕೆ. ಜಿ. ಯವರು ಮಾಸ್ಕೋಗೆ ತೆರಳಿ ಮಹಾಸಭೆ ಮುಗಿದ ನಂತರ ಕೆಲವು ತಿಂಗಳ ಕಾಲ ರಷ್ಯಾದಲ್ಲೇ ಇದ್ದು ಚಿಕಿತ್ಸೆಯನ್ನು ಪಡೆದುಕೊಂಡರು. ಚಿಕಿತ್ಸೆಯನ್ನು ಪಡೆಯುವ ಸಮಯದಲ್ಲೇ ಸ್ಟಾಲಿನ್ ಮರಣವನ್ನಪ್ಪಿದರು. ಆ ವಿಷಯಗಳ ಮೇಲೆ ತನ್ನ ಆತ್ಮಕತೆಯಲ್ಲಿ ಪ್ರಸ್ತಾಪಿಸಿದ ವಿಷಯವನ್ನು ಇಲ್ಲಿ ಉಲ್ಲೇಖಿಸಲಾಗಿದೆ.)

ಮಹಾಸಭೆ ಮುಗಿದ ಕಡೇದಿನ ಮಹಾಸಭೆಯನ್ನುದ್ದೇಶಿಸಿ ಸ್ಟಾಲಿನ್ನರು ಭಾಷಣ ಮಾಡಿದರು. ಅವರ ಬಾಯಿಯಿಂದ ಹೊರಟ ಪ್ರತಿಯೊಂದು ಶಬ್ದಕ್ಕೂ ಜನರಿಂದ ಹರ್ಷ ನಿನಾದಗಳಾದವು. ಸ್ಟಾಲಿನ್‌ರ ಬಗ್ಗೆ ಪ್ರೇಮದಿಂದ, ಗೌರವದಿಂದ, ಜನರ ಹೃದಯಗಳು ತುಂಬಿ ತುಳುಕಾಡಿದ್ದನ್ನು ನಾನು ಕಣ್ಣಾರೆ ಕಂಡಿದ್ದೇನೆ.

ಮಾರನೆಯ ದಿನ ಕ್ರೆಮ್‌ಲಿನ್ ಭವನದಲ್ಲಿ ದೊಡ್ಡ ಔತಣ ಜರುಗಿತು. ಭಾರತದೇಶಕ್ಕೆ ಸ್ಟಾಲಿನ್‌ರ ಪಕ್ಕದ ನಾಲ್ಕನೇ ಸ್ಥಾನವನ್ನು ತೆರವು ಮಾಡಿದ್ದರು. ಭಾರತ ದೇಶದ ಹೆಸರು ಸೂಚಿಸುವಲ್ಲಿಗೆ ಸ್ಟಾಲಿನ್ ನನ್ನ ಹತ್ತಿರ ಬಂದಿದ್ದರು. ಗ್ಲಾಸನ್ನು ನನ್ನ ಗ್ಲಾಸಿನ ಹತ್ತಿರಕ್ಕೆ ಸೇರಿಸಿ "ಭಾರತದೇಶಕ್ಕೆ" ಎಂದು ಮಾತ್ರ ಹೇಳಿದರು. ನನ್ನ ಆರೋಗ್ಯವನ್ನೂ ಮತ್ತು ಅಜಯ್‌ರ ಆರೋಗ್ಯವನ್ನೂ ಕುರಿತು ಮಾತುಕತೆ ನಡೆಯಿತು. ನಂತರ ನೀವು ಭಾರತ ದೇಶಕ್ಕೆ ಹಿಂದಿರುಗುವ ಮೊದಲು

(7ನೇ ಪುಟ ನೋಡಿ)

ಹಳಿಯಾಳ ಪೋಲೀಸ್ ದೌರ್ಜನ್ಯದ ವಿರುದ್ಧ ರಾಜ್ಯದಾದ್ಯಂತ ಪ್ರತಿಭಟನೆ

ಬಂಜರು ಭೂಮಿಯ ವಿತರಣೆಗಾಗಿ ತುಂಬ ಶಾಂತಿಯುತವಾಗಿ ಸತ್ಯಾಗ್ರಹ ನಡೆಸುತ್ತಿದ್ದ ರೈತರ ಮೇಲೆ ಆಳುವ ವರ್ಗಗಳು ಪೋಲೀಸ್ ಮುಖಾಂತರ ನಡೆಸಿದ ದೌರ್ಜನ್ಯವನ್ನು ಖಂಡಿಸಿ ರಾಜ್ಯದಾದ್ಯಂತ ಅನೇಕ ನಗರಗಳಲ್ಲಿ ಪ್ರತಿಭಟನೆ ನಡೆಯಿತು. ಹುತಾತ್ಮರಾದ ಶ್ರೀ ಮಾರುತಿ ಪವಾರ್ ಅವರ ಕುಟುಂಬಕ್ಕೆ ಪರಿಹಾರ ನೀಡಬೇಕೆಂದು ರಾಜ್ಯದ ರೈತಕಾರ್ಮಿಕರು ಒತ್ತಾಯಿಸಿದರು.

ಶಿವಮೊಗ್ಗ

ಉತ್ತರಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ರೈತರ ಮೇಲೆ ವಿನಾಕಾರಣ ಲಾಠಿಚಾರ್ಜು, ಟಿಯರ್‌ಗ್ಯಾಸ್ ಮತ್ತು ಗೋಲಿಬಾರ್ ಮಾಡಿರುವುದನ್ನು ಖಂಡಿಸಲು ಶಿವಮೊಗ್ಗದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ದಿನಾಂಕ 20.6.79ರಂದು ಕಾಂ. ಚಂದುಕುಟ್ಟಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಚಳುವಳಿಯ ಸಂದರ್ಭದಲ್ಲಿ ಬಂಧಿತರ ಬಿಡುಗಡೆ, ಪೋಲೀಸ್ ಗೋಲಿಬಾರ್‌ನ ಬಗ್ಗೆ ನ್ಯಾಯಾಂಗ ವಿಚಾರಣೆ, ಕೃಷಿ ಕಾರ್ಮಿಕರಿಗೆ ಭೂಮಿ ಹಂಚಿಕೆ, ನಿಧನ ಹೊಂದಿದ ರೈತನ ಕುಟುಂಬಕ್ಕೆ ಪರಿಹಾರ ಇವುಗಳ ಬಗ್ಗೆ ನಿರ್ಣಯಗಳನ್ನು ಸಭೆಯಲ್ಲಿ ಅಂಗೀಕರಿಸಲಾಯಿತು. ಈ ನಿರ್ಣಯಗಳನ್ನು ಜಿಲ್ಲಾ ಡೈಪುಟಿ ಕಮೀಷನರ್ ಅವರ ಮುಖಾಂತರ ಸರ್ಕಾರಕ್ಕೆ ಕಳುಹಿಸಬೇಕೆಂದು ತೀರ್ಮಾನಿಸಲಾಯಿತು.

ತುಮಕೂರು

ತುಮಕೂರು ಜಿಲ್ಲೆಯ ಪಕ್ಷದ ಸಮಿತಿಯು ದಿನಾಂಕ 20.6.79ರಂದು ಸಭೆ ಸೇರಿ ಹಳಿಯಾಳ ಪೋಲೀಸ್ ಗೋಲಿಬಾರ್, ದೌರ್ಜನ್ಯವನ್ನು ಖಂಡಿಸಿತು. ಬಂಧಿತರ ಬಿಡುಗಡೆಯಾಗಬೇಕು ಮತ್ತು ಭೂಹೀನರಿಗೆ ಜಮೀನು ಹಂಚಬೇಕು ಎಂದು ಒತ್ತಾಯಿಸುವ ತಂತಿಯೊಂದನ್ನು ಮುಖ್ಯಮಂತ್ರಿಗಳಿಗೆ ಕಳುಹಿಸಲಾಯಿತು.

ಧಾರವಾಡ

ಉತ್ತರ ಕರ್ನಾಟಕದ ಕಾರ್ಮಿಕ ಸಮನ್ವಯ ಸಮಿತಿಯ ಕಾರ್ಮಿಕರು ಮತ್ತು ಮುಷ್ಕರ ನಡೆಸುತ್ತಿರುವ ಧಾರವಾಡ ಕೃಷಿ ಕಾಲೇಜಿನ ಕೂಲಿಕಾರರು ಸೇರಿ ಹಳಿಯಾಳ ದೌರ್ಜನ್ಯದ ಬಗ್ಗೆ ಪ್ರತಿಭಟನೆ ನಡೆಸಿದರು. ಧಾರವಾಡದ ಪ್ರಮುಖ ಬೀದಿಗಳಲ್ಲಿ ಫಲಕಗಳನ್ನು ಹೊತ್ತು ಘೋಷಣೆ ಕೂಗುತ್ತ ಮೆರವಣಿಗೆ ನಡೆಸಿದ ನಂತರ ಕಾರ್ಪೋರೇಷನ್ ಹಾಲ್‌ನಲ್ಲಿ ಸಭೆ ಸೇರಿದರು. ಸಭೆಯ ಅಧ್ಯಕ್ಷತೆಯನ್ನು ಕೃಷಿಕಾರ್ಮಿಕ ಸಂಘದ ಅಧ್ಯಕ್ಷ ಕಾಂ. ಜಿ. ಎ. ಹಿರೇಮಠ ಅವರು ವಹಿಸಿದ್ದರು. ಕಾಂ. ಆರ್. ಜಿ. ಸ್ಥಳೇಕರ್ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಎಲ್. ಐ.ಸಿ.ಯ ಕೆ. ಜಿ. ಕುಲಕರ್ಣಿ, ಎಮ್. ಕೆ. ದೇಶಪಾಂಡೆ, ಪ್ಲೈವುಡ್ ಕಂಪೆನಿಯ ಪರಪ್ಪ, ಮೀನಾಕ್ಷಿ ಆಯಿಲ್ ಮಿಲ್ಲಿನ ಅಣ್ಣಾರೈ, ಕೃಷಿಕಾರ್ಮಿಕ ಸಂಘದ ಕಾರ್ಯದರ್ಶಿ ಕದಂ ಇವರೆಲ್ಲ ಮಾತನಾಡಿದ ನಂತರ ಸಭೆಯು ಕೆಲವು ನಿರ್ಣಯಗಳನ್ನು ಕೈಗೊಂಡಿತು. ದಿನಾಂಕ 20.6.79ರ ಮಧ್ಯಾಹ್ನ ಯಡೂರು ಮಹಾಬಲ ಅವರ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳನ್ನು ಕಂಡು ಮನವಿ ಅರ್ಪಿಸಲಾಯಿತು.

ಶಿಡ್ಲಘಟ್ಟ

ಕೋಲಾರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕಿನ ರೈತಸಂಘದ ಮತ್ತು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತರು ದಿನಾಂಕ 20.6.79 ರಂದು ಬೆಳಿಗ್ಗೆ 10ರಿಂದ 2.30ಯವರೆಗೆ ತಾಲ್ಲೂಕು ಕಚೇರಿಯ ಮುಂದೆ ಧರಣಿ ಮುಷ್ಕರ ನಡೆಸಿದರು. ಅಲ್ಲಿ 1,500 ಜನ ಸಹಿ ಇರುವ ಮನವಿಯನ್ನು ತಹಸೀಲ್ದಾರ್‌ರವರಿಗೆ ಅರ್ಪಿಸಲಾಯಿತು. ನಂತರ ತಾಲ್ಲೂಕು ಕಚೇರಿಯಿಂದ ಮೆರವಣಿಗೆ ಹೊರಟು ಮುಖ್ಯ ಬೀದಿಗಳಲ್ಲಿ ಪ್ರದರ್ಶನ ನಡೆಸಲಾಯಿತು. 300 ಮಹಿಳೆಯರೂ ಭಾಗವಹಿಸಿದ್ದ ಈ ಮೆರವಣಿಗೆಯ ನೇತೃತ್ವವನ್ನು ಕಾಂ. ಜಿ. ಪಾಪಣ್ಣ, ಕೆ. ಎಂ. ವೆಂಕಟೇಶ್, ಜೆ. ದೊರೆಸ್ವಾಮಿ, ಎಂ. ಮಣಿ, ಎಸ್. ಸರೋಜಮ್ಮ ಮುಂತಾದವರು ವಹಿಸಿದ್ದರು.

ಹರಿಹರ

ದಿನಾಂಕ 20.6.79ರಂದು ಹರಿಹರದಲ್ಲಿ ಹಳಿಯಾಳ ಪೋಲೀಸ್ ದೌರ್ಜನ್ಯವನ್ನು ಖಂಡಿಸಲು ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಹರಿಹರದ ಕಾರ್ಮಿಕ ನಾಯಕ ಕಾಂ. ಬಿ. ಸದಾಶಿವಪ್ಪ ಅವರು ವಹಿಸಿದ್ದರು. ರಾಜ್ಯ ಸಮಿತಿ ಸದಸ್ಯರಾದ ಕಾಂ. ಪಿ. ಆರ್. ನಾಯಕ್ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಕಾಂ. ಡಿ. ಜಿ. ಜೋಶಿ, ಸಯ್ಯದ್‌ಪೀರ್ ಅವರು ಮಾತನಾಡಿದ ನಂತರ ಹಳಿಯಾಳ ಘಟನೆ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದು ಒತ್ತಾಯಿಸಲಾಯಿತು.

ಸುಳ್ಯ

ದಕ್ಷಿಣಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ರೈತಸಂಘವು ದಿನಾಂಕ 20.6.79ರಂದು ಪೋಲೀಸರ ಅಮಾನುಷ ದಬ್ಬಾಳಿಕೆಯನ್ನು ಖಂಡಿಸಲು ಸಭೆ ಸೇರಿತ್ತು. ಸಭೆಯಲ್ಲಿ ಕಾಂ. ಮೋನಪ್ಪಗೌಡ ಮತ್ತು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಸುಳ್ಯ ತಾಲ್ಲೂಕು ಸಮಿತಿಯ ಕಾರ್ಯದರ್ಶಿ ಕಾಂ. ಸೂರ್ಯನಾರಾಯಣಭಟ್ ಅವರು ಮಾತನಾಡಿದರು. ಸುಳ್ಯದ ತಾಲ್ಲೂಕು ಕಚೇರಿಗೆ ರೈತಕಾರ್ಮಿಕರು ಮೆರವಣಿಗೆ ನಡೆಸಿ, ಬೇಡಿಕೆಗಳನ್ನುಳ್ಳ ಮನವಿಯನ್ನು ಮುಖ್ಯಮಂತ್ರಿಗಳಿಗೆ ಕಳುಹಿಸಲು ತಹಸೀಲ್ದಾರರಿಗೆ ಅರ್ಪಿಸಲಾಯಿತು. ಕಾಂ. ಪಿ. ಕೆ. ಮೂಸಾ, ಕಾಂ. ಕರ್ನಲ್ ಕ್ರಾಸ್ತಾ, ಕಾಂ. ಬಿ. ವೆಂಕಟರಮಣ, ಕಾಂ. ಭಾಸ್ಕರರಾವ್, ಕಾಂ. ಕೂಸಪ್ಪಗೌಡ ಅವರುಗಳು ಮೆರವಣಿಗೆ ಮತ್ತು ಮನವಿ ಸಮರ್ಪಣೆಯಲ್ಲಿ ಭಾಗವಹಿಸಿದ್ದರು.

ಕುಂದಾಪುರ

ದಕ್ಷಿಣಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ, ಸಿ.ಐ.ಟಿ.ಯು., ರೈತಸಂಘ, ಇವುಗಳ ನೇತೃತ್ವದಲ್ಲಿ ದಿನಾಂಕ 20.6.79ರಂದು ಹಳಿಯಾಳ ರೈತರಿಗೆ ಬೆಂಬಲಪೂರ್ವಕ ಮತಪ್ರದರ್ಶನ ನಡೆಸಲಾಯಿತು. ಕುಂದಾಪುರದ ಬೇರೆ ಬೇರೆ ಭಾಗಗಳ ರೈತಕಾರ್ಮಿಕರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ರಾಜ್ಯದ ಮುಖ್ಯಮಂತ್ರಿಗಳಿಗೆ ಕಳುಹಿಸಲು ತಹಸೀಲ್ದಾರರಿಗೆ ಮನವಿ ಸಮರ್ಪಿಸಲಾಯಿತು. ನಂತರ ಕುಂದಾಪುರ ಹಂಚಿನ ಕೆಲಸಗಾರರ ಸಂಘದ ಆಫೀಸಿನಲ್ಲಿ ಸೇರಿದ ಸಭೆಯಲ್ಲಿ ಹಳಿಯಾಳ ಚಳುವಳಿಯಲ್ಲಿ ಹುತಾತ್ಮರಾದ ಮಾರುತಿ ಪವಾರ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಸಭೆಯಲ್ಲಿ ಕಾಂ. ಸಿ. ನಾರಾಯಣ, ಅಬ್ರಹಾಂ ಕರ್ಕಡ, ಕೆ. ಶಂಕರ್ ಇವರು ಮಾತನಾಡಿದರು.

ಹಾಸನ

ತಾ. 20-6-79 ರಂದು 467 ಜನ ರೈತ ಕೂಲಿಗಾರರು, ಕಾರ್ಮಿಕರು ಹಾಗೂ ಸಾರ್ವಜನಿಕರು ಸಹಿ ಮಾಡಿದ ಮನವಿ ಪತ್ರವೊಂದನ್ನು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಯವರಿಗೆ, ಹಾಸನ ಜಿಲ್ಲಾಧಿಕಾರಿಯವರ ಮುಖಾಂತರ ಕಳುಹಿಸಲಾಗಿದೆ.

ಈ ಮನವಿಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ತಾ. 7-6-79 ರಂದು ಬಡ ರೈತ, ಕೃಷಿಕೂಲಿಗಾರರ ಮೇಲೆ ಅಲ್ಲಿಯ ಪೋಲೀಸರು ಅಮಾನುಷ ದಾಳಿ ನಡೆಸಿದ್ದರ ವಿರುದ್ಧ ಖಂಡಿಸುವ ಹಾಗೂ ಕೂಡಲೇ ಇದರ ಬಗ್ಗೆ ನ್ಯಾಯಾಂಗ ತನಿಖೆ ನಡೆಸಿ ಗೋಲಿಬಾರಿನಲ್ಲಿ ಮೃತರಾದ ಶ್ರೀ ಮಾರುತಿ ಪವಾರ್‌ರವರ ಕುಟುಂಬಕ್ಕೆ ಪರಿಹಾರ ನೀಡುವಂತೆ ಬೇಡಿಕೆಗಳಿವೆ.

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಯ ಕರ್ನಾಟಕ ರಾಜ್ಯ ಸಮಿತಿ, ಸಿ.ಐ.ಟಿ.ಯು. ರಾಜ್ಯ ಸಮಿತಿ ಮತ್ತು ಕರ್ನಾಟಕ ಪ್ರಾಂತ ರೈತಸಂಘಗಳು ಜಂಟಿಯಾಗಿ ಕೊಟ್ಟ ಕರೆಗನುಸಾರವಾಗಿ ಈ ಮನವಿ ಪತ್ರವನ್ನು ನೀಡಲಾಗಿದೆ. ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳ ಹಲವಾರು ತೋಟಗಳಲ್ಲಿ ಮತ್ತು ಗ್ರಾಮಗಳಲ್ಲಿ ಸಹಾ ಸಭೆಗಳನ್ನು ನಡೆಸಿ, ಗೋಲಿಬಾರನ್ನು ಖಂಡಿಸಲಾಗಿದೆ.

ಶಿರಸಿ

ಉತ್ತರಕನ್ನಡ ಜಿಲ್ಲೆಯ, ಶಿರಸಿ ತಾಲ್ಲೂಕು ರೈತಸಂಘವು ತಾ. 20.6.79ರಂದು ಶಿರಸಿಯ, ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕಛೇರಿಯಿಂದ ಮೆರವಣಿಗೆ ಹೊರಟು, ಹಳಿಯಾಳದಲ್ಲಿ ನಡೆದ ಗೋಲಿಬಾರನ್ನು ಖಂಡಿಸುವ ಮನವಿಪತ್ರವನ್ನು ತಹಸೀಲ್ದಾರರಿಗೆ ಸಲ್ಲಿಸಿದ ನಂತರ, ಮುನಿಸಿಪಾಲಿಟಿ ಎದುರು ಬಹಿರಂಗ ಸಭೆಯನ್ನು ನಡೆಸಿದರು. ಪಕ್ಷದ ಕಾರ್ಯದರ್ಶಿ ಕಾಂ. ಪ್ರಲಕರರವರು ಮಾತನಾಡುತ್ತಾ, ರೈತಕಾರ್ಮಿಕರು ಅನ್ಯಾಯದ ವಿರುದ್ಧ ಐಕ್ಯತೆಯಿಂದ ಹೋರಾಡಬೇಕೆಂದು ಕರೆಯಿತ್ತರು. ರೈತಸಂಘದ ಕಾರ್ಯದರ್ಶಿ ಕಾಂ. ಬಂಗಾರೇಶ್ವರ ಕೆರಿಯಗೌಡರು, ತಾ. 7.6.79ರಂದು ಹಳಿಯಾಳದ ರೈತರ ಮೇಲೆ ಪೋಲೀಸರು ನಡೆಸಿದ ದೌರ್ಜನ್ಯವನ್ನು ಖಂಡಿಸಿದರು. ನಂತರ ಕಾಂ. ಧಾರೇಶ್ವರ್‌ರವರು, ಶ್ರೀ ದೇವರಾಜ ಅರಸ್ ಮತ್ತು ಶ್ರೀ ಬಂಗಾರಪ್ಪನವರು ಉ. ಕ. ಜಿಲ್ಲೆಯ ರೈತರಿಗೆ ಗಾಳಿಗೋಪುರದಿಂದ ಮೋಸಮಾಡುತ್ತಿರುವುದನ್ನು ವಿವರಿಸಿ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವ ಮಾತ್ರ ರೈತರ ಬೇಡಿಕೆಗಳನ್ನು ಈಡೇರಿಸುತ್ತದೆ ಎಂದರು.

ಮಸಾಲ್ದಿ ಅವರಿಂದ ಅಭಾರ ಮನ್ನಣೆ ಆದ ನಂತರ ಸಭೆ ಮುಗಿಯಿತು.

ದೊಡ್ಡಬಳ್ಳಾಪುರ

ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ 20.6.79 ರಂದು ನೂರಾರು ಜನ ರೈತ–ಕಾರ್ಮಿಕರ ಮೆರವಣಿಗೆ ನಡೆಯಿತು. ಕಾ.ರಾಮಭದ್ರಯ್ಯನವರ ನೇತೃತ್ವದಲ್ಲಿ ನಿಯೋಗವೊಂದು ತಹಸೀಲ್ದಾರನ್ನು ಭೇಟಿಯಾಗಿ, ಮನವಿಯನ್ನು ಅರ್ಪಿಸಿತು. ಆಮೇಲೆ ಪುರಸಭೆಯೆದುರು ನಡೆದ ಬಹಿರಂಗ ಸಭೆಯಲ್ಲಿ ಕಾಂ.ರಾಮಭದ್ರಯ್ಯ, ಪಂಚಾಯಿತಿ ಚೆಯರ್‌ಮೇನ್ ಕಾಂ. ದೊಡ್ಡಯ್ಯ. ಸ್ಥಳೀಯ ವಿದ್ಯಾರ್ಥಿ ಫೆಡರೇಶನ್ ಕಾರ್ಯದರ್ಶಿ ಮೊದಲಾದವರು ಭಾಷಣ ಮಾಡಿದರು. ಬೇಡಿಕೆಗಳ ಬಗ್ಗೆ ಸರಕಾರ ಕ್ರಮ ತೆಗೆದುಕೊಳ್ಳದಿದ್ದಲ್ಲಿ ರಾಜ್ಯದಾದ್ಯಂತ ಹೋರಾಟವನ್ನು ಇದಿರಿಸಬೇಕಾದಿತೆಂದು ಭಾಷಣಕಾರರು ಸರಕಾರವನ್ನು ಎಚ್ಚರಿಸಿದರು. ೦

ದ್ರಾಕ್ಷಿ ಕೆಲಸಗಾರರ ಹೋರಾಟ

ಬೆಂಗಳೂರು ದ್ರಾಕ್ಷಿ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘದ ಕೆಲಸಗಾರರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ತಾರೀಖು 11-6-79 ರಿಂದ ಮುಷ್ಕರ ಆರಂಭಿಸಿದ್ದರೂ ಸಹ ಸಂಘದ ಅಧಿಕಾರ ವರ್ಗದವರು ಮಾತುಕತೆಗೆ ಬಾರದೆ ಇರುವುದರಿಂದ ಅಧಿಕಾರ ವರ್ಗದ ಮೇಲೆ ಒತ್ತಾಯ

[7ನೇ ಪುಟ ನೋಡಿ]

ಐಕ್ಯರಂಗ ಮಾರಾಟ

ಬೆಂಗಳೂರಿನ ನಗರ ಶಾಖೆಯ ಕಾರ್ಯದರ್ಶಿ ಕಾಂ. ಅಯ್ಯಪ್ಪನವರ ನೇತೃತ್ವದಲ್ಲಿ ಪ್ರತಿ ಭಾನುವಾರ ಐಕ್ಯರಂಗ ಪತ್ರಿಕೆಯನ್ನು ರಸ್ತೆಯಂಚಿನಲ್ಲಿ ಮಾರಲು ಪ್ರಾರಂಭಿಸಿದ್ದಾರೆ.

ನಾಲ್ಕಾರು ಗುಂಪುಗಳಾಗಿ ವಿಂಗಡಿಸಿ ಕೆಂಪೇಗೌಡ ಸರ್ಕಲ್, ಸಿಟಿಮಾರ್ಕೆಟ್, ಕಲಾಸಿಪಾಳ್ಯಂ, ಶಿವಾಜಿನಗರಗಳಂತಹ ಜನನಿಬಿಡ ಪ್ರದೇಶಗಳಲ್ಲಿ ಐಕ್ಯರಂಗವನ್ನು ಮಾರಿದರೆ, ಪಕ್ಷದ ಪ್ರಚಾರ ಮತ್ತು ನಿಲುವುಗಳನ್ನು ಜನತೆಗೆ ತಲುಪಿಸಲು ಸುಲಭವೆಂದು ತೀರ್ಮಾನಿಸಿದೆ.

ಈ ಶಾಖೆ ಈಗಾಗಲೇ ವಾರಕ್ಕೆ ಒಂದೆರಡು ಗಂಟೆಗಳಲ್ಲಿ ಸುಮಾರು 200ಕ್ಕಿಂತಲೂ ಹೆಚ್ಚು ಪತ್ರಿಕೆಗಳನ್ನು ಮಾರಿ ಹೊಸ ದಾಖಲೆಯನ್ನು ಸ್ಥಾಪಿಸಿ ಕೆಲವೇ ತಿಂಗಳುಗಳಲ್ಲಿ ವಾರಕ್ಕೆ ಸಾವಿರಾರು ಪತ್ರಿಕೆಗಳನ್ನು ಮಾರುವ ವಿಶ್ವಾಸವನ್ನು ಹೊಂದಿದೆ.

......ಎ. ಕೆ. ಜಿ. ಸ್ಮೃತಿಗಳು

(5ನೇ ಪುಟದಿಂದ)

ನನ್ನನ್ನು ಭೇಟಿ ಮಾಡಬೇಕೆಂದು ಕೇಳಿಕೊಂಡರು. ಆದರೆ, ನಾನು ಭಾರತ ದೇಶಕ್ಕೆ ಹಿಂದಿರುಗುವ ಮೊದಲೇ ಸ್ಟಾಲಿನ್‌ರವರು ಮರಣವನ್ನಪ್ಪಿದರು. (ಮಹಾಸಭೆ ಮುಗಿದ ನಂತರ ನನ್ನನ್ನು ಸ್ಯಾನಿಟೋರಿಯಂ ಆಸ್ಪತ್ರೆಗೆ ಸೇರಿಸಲಾಯಿತು. ಈ ಸಂದರ್ಭದಲ್ಲಿ 8 ತಿಂಗಳು ಚಿಕಿತ್ಸೆ ಹೊಂದಬೇಕಾಯಿತು. 1953 ಮಾರ್ಚ್ 6ನೇ ತಾರೀಖು ಸ್ಟಾಲಿನ್ ಅವರು ಮರಣವನ್ನಪ್ಪಿದರು)

ಕಾಂ. ಸ್ಟಾಲಿನ್ ಅಸ್ವಸ್ಥವಾಗಿದ್ದಾರೆಂದು ಮಾರ್ಚ್ 3ನೇ ತಾರೀಖು ಕಾಂ. ನಿಕ್ರೋಸೋವ್ ನನಗೆ ಹೇಳಿದರು. ಉಲ್ಲಾಸವಾಗಿದ್ದ ನಮ್ಮ ವಾರ್ಡಿನಲ್ಲಿ ಮಂಕು ಕವಿದಹಾಗೆ ಜನರು ವರ್ತಿಸುತ್ತಿದ್ದರು. ನಾನು 6ನೇ ತಾರೀಖು ನಿದ್ರೆಯಿಂದೇಳುವುದು ಸ್ವಲ್ಪ ತಡವಾಯಿತು. ದುಃಖಬರಿತವಾದ ಸುದ್ದಿ ನನ್ನ ಕಿವಿಯಲ್ಲಿ ಬಿತ್ತು. ಸ್ಟಾಲಿನ್ ಮರಣವನ್ನಪ್ಪಿದರು! ಡಾಕ್ಟರುಗಳ ಅನುಮತಿ ಪಡೆದು ಒಬ್ಬ ಡಾಕ್ಟರ್ ಮತ್ತು ಮೂವರು ಸಹಾಯಕರು ಸಾಯಂಕಾಲ 4 ಗಂಟೆಗೆ ಮಾಸ್ಕೋಗೆ ಪ್ರಯಾಣ ಮಾಡಿದೆವು. ಹೋಗುವಾಗ ದಾರಿ ಉದ್ದಕ್ಕೂ ಎಲ್ಲ ಮನೆಗಳ ಮೇಲೆ ಸ್ಟಾಲಿನ್‌ರ ಚಿತ್ರಪಟ ಪ್ರದರ್ಶನ ಮಾಡಿದ್ದನ್ನು ನೋಡಿದೆ. ಹಾಗೂ, ಆ ಪಟಕ್ಕೆ ಕೆಂಪು ಹೂಗಳಿಂದ ಮತ್ತು ಕಪ್ಪು ಅಂಚುಗಳಿಂದ ಕೆಂಪು ಬಾವುಟಗಳಿಂದ ಮಂಚವನ್ನು ಏರ್ಪಡಿಸಿದ್ದರು. ಎಲ್ಲಾ ರಂಗಗಳಿಗೂ ಸೇರಿದ ಜನರು ದುಃಖಸಾಗರದಲ್ಲಿ ಮುಳುಗಿದಂತೆ, ಹೃದಯಗಳು ಒಡೆದವರಂತೆ ಕಂಡರು. ವಿಮಾನಗಳಲ್ಲಿ, ರೈಲುಗಳಲ್ಲಿ, ಕಾಲ್ನಡಿಗೆಯಿಂದ ಪ್ರಜೆಗಳು ಧಾರಾಕಾರವಾಗಿ ಮಾಸ್ಕೋ ನಗರವನ್ನು ಸೇರಿ ತಮ್ಮ ನಾಯಕನ ಅಂತಿಮ ದರ್ಶನಮಾಡಿ ಶ್ರದ್ಧಾಂಜಲಿಯನ್ನು ಅರ್ಪಿಸಲು ಬರುತ್ತಿದ್ದರು.

ನಾವು 8ನೇ ತಾರೀಖು ಮಾಸ್ಕೋ ಸೇರಿದೆವು. ಮಾಸ್ಕೋದ ಸ್ವರೂಪವೇ ಬದಲಾವಣೆಯಾಗಿತ್ತು. ಮೌನ ಸಮುದ್ರೋಪಾದಿಯಲ್ಲಿ ಪ್ರಜೆಗಳ ಹಿಂಡು ಮೈಲಿಗಟ್ಟಲೆ ಕೂಡಿತ್ತು. ಮೈಕೊರೆಯುವ ಚಳಿಯಲ್ಲಿ ನಡುಗುತ್ತಾ ನಿಂತಿದ್ದಾರೆ–ಅವರು ತಮ್ಮ ನಾಯಕನ ಅಂತಿಮ ದರ್ಶನ ಪಡೆಯುವವರೆಗೂ ಹಿಂತಿರುಗುವುದಿಲ್ಲ ವೆಂಬ ದೃಢ ನಿಶ್ಚಯವನ್ನು ಮಾಡಿಕೊಂಡವರಾಗಿದ್ದಾರೆ. ಈ ಜನಪ್ರವಾಹವು ಹಗಲಿರುಳುಗಳು ಎಡೆಬಿಡದೆ ನಡೆದಿತ್ತು. ಭೌತಿಕ ದೇಹವನ್ನು ಇಟ್ಟ ಹಾಲಿನಲ್ಲಿ ಹೊಕ್ಕು ಭೌತಿಕ ಕಾಯದ ಮೇಲೆ ಪುಷ್ಪ ಗುಚ್ಛವನ್ನು ಇಟ್ಟೆನು. ನಂತರ ಅವರಿಗೆ ಸೈನಿಕ ವಂದನೆ (ಗಾರ್ಡ್ ಆಫ್ ಆನರ್) ಸಮರ್ಪಿಸುವುದಕ್ಕೆ ಇತರರ ಜೊತೆ ನಾನು ನಿಂತುಕೊಂಡೆನು. ಅದಾದ ನಂತರ ಸ್ವಲ್ಪ ಹೊತ್ತಿಗೆ ನನಗೆ ಒಂದು ಖುರ್ಚಿ ಸಿಕ್ಕಿತು. ನಾನು ನೋಡುತ್ತಿದ್ದಂತೆಯೇ ಭೌತಿಕಕಾಯ ವಿಟ್ಟಿದ್ದ ಹಾಲು ಪುಷ್ಪ ಗುಚ್ಛಗಳಿಂದ ತುಂಬಿ ಹೋಗಿತ್ತು. ಕಾಂ. ಸ್ಟಾಲಿನ್ನರ ಶವಪೆಟ್ಟಿಗೆಯನ್ನು ಲೆನಿನ್‌ರ ಸಮಾಧಿಯ ಪಕ್ಕದಲ್ಲೇ ಇಟ್ಟರು. ನಂತರ ಜನಗಳು ಎಲ್ಲಿನವರಲ್ಲಿಗೆ ನಿಶ್ಶಬ್ಧವಾಗಿ ಹಿಂತಿರುಗಿದರು. ನಾನು ಮತ್ತೆ ಆಸ್ಪತ್ರೆಗೆ ಹಿಂತಿರುಗಿದೆ.

(ಎ. ಕೆ. ಜಿ. ಯವರ ಆತ್ಮಚರಿತ್ರೆಯಿಂದ)

ದ್ರಾಕ್ಷಿ ಕೆಲಸಗಾರರ ಹೋರಾಟ

[6ನೇ ಪುಟದಿಂದ]

ತರುವುದಕ್ಕಾಗಿ ತಾರೀಖು 17-6-79 ರಂದು ಸುಮಾರು 30 ಮಂದಿ ಕೆಲಸಗಾರರು ನಗರದ ಮುಖ್ಯ ಬೀದಿಗಳಲ್ಲಿ ಸೈಕಲ್ ಮೆರವಣಿಗೆ ನಡೆಸಿ ಎಕ್ಸ್ ಅಫಿಸಿಯೋ ಮ್ಯಾನೇಜರ್ (ಪದನಿಮಿತ್ತಾ ಕಾರ್ಯದರ್ಶಿ) ಸಿದ್ದಪ್ಪನವರ ಮನೆ ಮುಂದೆ ಘೋಷಣೆಗಳನ್ನು ಕೂಗುವುದರ ಮೂಲಕ ತಮ್ಮ ಪ್ರತಿಭಟನೆಯನ್ನು ಸೂಚಿಸಿದರು. ಕೂಡಲೇ ಬೇಡಿಕೆಗಳನ್ನು ಇತ್ಯರ್ಥಗೊಳಿಸದೆ ಹೋದಲ್ಲಿ ಮುಷ್ಕರವು ಉಗ್ರರೂಪವನ್ನು ತಾಳಿದರೆ ಅದಕ್ಕೆ ಅಧಿಕಾರ ವರ್ಗದವರೇ ಜವಾಬ್ದಾರರೆಂದು ಮೈಸೂರು ಡಿಸ್ಟ್ರಿಕ್ಟ್ ಜನರಲ್ ಎಂಪ್ಲಾಯೀಸ್ ಯೂನಿಯನ್ ಎಚ್ಚರಿಕೆಯನ್ನಿತ್ತಿದೆ. ○

ಬೀದಿಬದಿವಾಸಿಗಳ ಮುಂದುವರಿದ ಹೋರಾಟ

[2ನೇ ಪುಟದಿಂದ]

ನೂರಾರು ಮಂದಿ ರೈತರು ಮತ್ತು ವ್ಯವಸಾಯ ಕೂಲಿಗಾರರು ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ನಂತರ ನಡೆದ ಸಭೆಯಲ್ಲಿ ಕೋಲಾರ ಜಿಲ್ಲಾ ರೈತ ಮುಖಂಡ ಕಾಂ. ಅಶ್ವತ್ ರೆಡ್ಡಿ, ಪ್ರಾಂತ ರೈತ ಸಂಘದ ಅಧ್ಯಕ್ಷ ಕಾಂ. ಎಚ್. ಮುಗವಾಳಪ್ಪ, ಮತ್ತು ಬೆಂಗಳೂರು ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಹಾಗೂ ಪ್ರಾಂತ ಸಮಿತಿಯ ಖಜಾಂಚಿ ಕಾಂ. ಪಿ. ಜಗನ್ನಾಥ – ಇವರುಗಳು ಭಾಷಣ ಮಾಡಿದರು. ಕಾಂ. ಆರ್. ವೆಂಕಟರಾಮಯ್ಯ, ಅಡ್ವೋಕೇಟ್, ಇವರು ಅತಿಥಿಗಳ ಪರಿಚಯ ಮಾಡುತ್ತಾ, ಸ್ವಾಗತ ಭಾಷಣ ಮಾಡಿದರು.

○

ರಾಯಚೂರು ಕೃಷಿ ವಿದ್ಯಾಲಯದ

ಅಸಂಘಟಿತ ಕಾರ್ಮಿಕರ ಕೂಗು

ಬಡವರ ಹೆಸರಿನಲ್ಲಿ ಬದುಕುತ್ತಿರುವ ಇಂದಿನ ಸರಕಾರ ಒಂದೆಡೆ ಕಾನೂನಿನಲ್ಲಿ ಕನಿಷ್ಟ ಕೂಲಿಯನ್ನು ನಿಗದಿಪಡಿಸುತ್ತದೆ. ಸಂಘಟನೆ ಮಾಡುವ ಹಕ್ಕು ಇದೆಯೆಂದು ಹೇಳುತ್ತದೆ. ಆದರೆ ನಿಜ ಜೀವನದಲ್ಲಿ ಸಂಘಟಿತ ಕಾರ್ಮಿಕರ ಹೋರಾಟ ಮುರಿಯಲು ಪೋಲೀಸ್ ಹಾಗೂ ಗೂಂಡಾಗಳನ್ನು ಬಳಸುತ್ತದೆ. ಇನ್ನೊಂದೆಡೆ ಅಸಂಘಟಿತರು ಸಂಘಟಿತರಾಗಲು ಪ್ರಯತ್ನ ಪಟ್ಟರೆ ಅವರನ್ನು ಕೆಲಸದಿಂದ ತೆಗೆದುಹಾಕುತ್ತದೆ.

ರಾಯಚೂರು ಕೃಷಿ ವಿದ್ಯಾಲಯದ ಕೃಷಿ ಸಂಶೋಧನ ಕೇಂದ್ರದಲ್ಲಿ ಸುಮಾರು 170ಕ್ಕೂ ಹೆಚ್ಚು ಜನ ಕೃಷಿ ಕಾರ್ಮಿಕರು ದುಡಿಯುತ್ತಿದ್ದಾರೆ. ಇವರಲ್ಲಿ ಕೇವಲ ಬೆರಳೆಣಿಸುವಷ್ಟು ಕಾರ್ಮಿಕರು ಮಾತ್ರ ಖಾಯಂ ನೌಕರರಾಗಿದ್ದಾರೆ. ಉಳಿದ ಬಹಳಷ್ಟು ಜನರು ಎಷ್ಟೋ ವರ್ಷಗಳಿಂದ ಕೆಲಸ ಮಾಡುತ್ತ ಬಂದಿದ್ದಾರೆ. ಆದರೆ ಯಾರನ್ನೂ ಖಾಯಂ ಮಾಡಿಲ್ಲ.

ಅಲ್ಲದೆ ದಿನಗೂಲಿ ಕೇವಲ 4-60 ಪೈಸೆ ಮಾತ್ರ ಕೊಡುತ್ತಾರೆ. ಅದರಲ್ಲಿ ಅರ್ಧದಷ್ಟು ಹೆಂಗಸರಿದ್ದೂ 4-60 ಪೈಸೆದಿಂದಲೂ ವಂಚಿತರಾಗಿದ್ದಾರೆ. ದೇಶದ ಯಾವುದೇ ಭಾಗದಲ್ಲಿಯಂತೆ ಇಲ್ಲಿಯೂ ಹೆಚ್ಚಿನ ಕೃಷಿ ಕಾರ್ಮಿಕರು ಭೂರಹಿತರಾಗಿದ್ದು, ದಿನದ ಕೂಲಿ ಕೆಲಸದ ಮೇಲೆ ಅವಲಂಬಿಸಿದ್ದು, ಸಮಾಜದ ಅತ್ಯಂತ ತುಳಿತ ಶೋಷಣೆಗೊಳಗಾಗಿ ಹಿಂದುಳಿದು ಅತ್ಯಂತ ಕಷ್ಟಕಾರ್ಪಣ್ಯಗಳನ್ನು ಅನುಭವಿಸಿರುವವರಾಗಿದ್ದಾರೆ.

ದೇಶದಲ್ಲಿ ಹಣದುಬ್ಬರ, ಬೆಲೆಯೇರಿಕೆ, ಹೆಚ್ಚಿನ ತೆರಿಗೆ ಏರುವಿಕೆಯಿಂದಾಗಿ ಮೊದಲೇ ಕಡುಬಡತನದಲ್ಲಿ ಬಳಲುತ್ತಿರುವ ಕೃಷಿಕಾರ್ಮಿಕರ ಕೊಳ್ಳುವ ಶಕ್ತಿ ಕ್ಷೀಣಿಸಿ ಜೀವನ ಕಷ್ಟಮಯವಾಗಿದೆ. ದೇಶದಲ್ಲಿ ಶ್ರೀಮಂತರು ಪಗಾರ, ಭತ್ತೆ ಮತ್ತು ಹೊಸದಾಗಿ ಪೆನ್ಶನ್ನುಗಳನ್ನು ಏರಿಸಿಕೊಂಡಿದ್ದಾರೆ.

ಇದೇ ಕಾಲೇಜಿನಲ್ಲಿ ದುಡಿಯುವ, ಎತ್ತು, ಎಮ್ಮೆ, ದನಗಳಿಗೆ ವಸತಿ, ಔಷಧೋಪಚಾರ, ಸರಿಯಾದ ಆಹಾರ, ವಿಶ್ರಾಂತಿಗಳಿದ್ದರೆ, ಇಲ್ಲಿ ದುಡಿಯುವ ಅಸಂಘಟಿತ ಕಾರ್ಮಿಕರ ಪರಿಸ್ಥಿತಿಯೂ ಸ್ವಲ್ಪವೂ ಸುಧಾರಣೆಯಾಗುತ್ತಿಲ್ಲ. ದಿನವಿಡೀ ಬಿಸಿಲು, ಮಳೆ, ಚಳಿಯೆನ್ನದೆ ಗಾಣದ ಎತ್ತಿನಂತೆ ದುಡಿಯುವದೊಂದೇ ಕೃಷಿ ಕಾರ್ಮಿಕರ ಪಾಲಾಗಿದ್ದು ದುಡಿತಕ್ಕೆ ತಕ್ಕ ಫಲವು ಸಿಗುತ್ತಿಲ್ಲ.

ಯಾವ ಕಾರ್ಮಿಕರ ದುಡಿಮೆಯಿಂದಲೇ ಸಮಾಜ ನಿಂತಿದೆಯೋ ಅವರ ಹೋರಾಟಕ್ಕೆ, ನ್ಯಾಯವಾದ ಬೇಡಿಕೆಗಳಿಗೆ, ಕಾಲೇಜಿನ ನೌಕರ, ಶಿಕ್ಷಕ, ವಿದ್ಯಾರ್ಥಿ, ಸಂಘಟಿತ ಕಾರ್ಮಿಕ ಬಾಂಧವರೆಲ್ಲರೂ ಬೆಂಬಲಿಸಿ, ಸಹಾಯ ಸಹಕಾರವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇವೆ.

ಈಗ ರಾಜ್ಯಾದ್ಯಂತ ಕೃಷಿ ವಿದ್ಯಾಲಯದ ಅಸಂಘಟಿತ ಕಾರ್ಮಿಕರ ಹೋರಾಟ ನಡೆಯುತ್ತಲಿದ್ದು, ಧಾರವಾಡ ಕೃಷಿ ಮಹಾವಿದ್ಯಾಲಯದ ಕಾರ್ಮಿಕರು ತಾ॥ 11.6.79ರಿಂದ ತಮ್ಮ ನ್ಯಾಯವಾದ ಬೇಡಿಕೆಗಳಿಗೆ ಹೋರಾಟ ಮಾಡುತ್ತಲಿದ್ದಾರೆ, ಅವರಿಗೆ ನಮ್ಮ ಬೆಂಬಲ ಸೂಚಿಸುತ್ತ ರಾಯಚೂರು ಕೃಷಿಕಾರ್ಮಿಕರು ತಮ್ಮ ಹೋರಾಟವನ್ನು ಮುನ್ನಡೆಸುತ್ತಲಿದ್ದಾರೆ. ●

ಔಷಧ ಬೆಲೆ ನಿಯಂತ್ರಣ ಆಜ್ಞೆ ಕೆಲವು ಮಾತು

—ನರೇಶ್‌ಬ್ಯಾನರ್ಜಿ (P.D. ಇಂದ)

1. ಒಂದು ಮತ್ತು ಎರಡನೇ ಗಣಕ್ಕೆ ಸೇರಿದ ಜೀವ ಉಳಿಸುವ ಔಷಧಗಳ ಘೋಷಿತ ಬೆಲೆಯು ಹಾಲಿ ಇರುವ ಬೆಲೆಗಳಿಗಿಂತ ಹೆಚ್ಚಿನದಾಗಿದೆ. ಆದ್ದರಿಂದ ವಿಶೇಷವಾಗಿ 1 ಮತ್ತು 2ನೇ ಗಣದ ಯಾವುದೇ ಔಷಧಗಳ ಬೆಲೆಯೂ ಕಡಿಮೆಯಾಗುವುದಿಲ್ಲ.

2. 3ನೇ ಗಣಕ್ಕೆ ಸೇರುವ ಔಷಧಿಗಳಿಗೆ ಬೆಲೆ ಏರಿಕೆಯನ್ನು ಇದೇ ಗಣದ ಅನೇಕ ಔಷಧಿಗಳಿಗೆ ಮುಂಚೆ ಕೊಟ್ಟಿದ್ದ ಬೆಲೆ ಏರಿಕೆಗಿಂತ ನೂರಕ್ಕೆ ನೂರು ಕೊಟ್ಟಿರುವುದು ಒಳ್ಳೆಯ ಏರಿಕೆಯೇ ಆಗಿದೆ.

3. 1979ರ ಮೇ 1 ರಿಂದ ಜಾರಿಯಾಗುವ ಈ ಔಷಧ ಬೆಲೆ ನಿಯಂತ್ರಣ ಆಜ್ಞೆಯ ಪರಿಣಾಮವಾಗಿ ಯಾವುದರ ಬೆಲೆಯೂ ಇಳಿದಿಲ್ಲ. ಅದಷ್ಟೇ ಅಲ್ಲ, 3ನೇ ಗಣಕ್ಕೆ ಸೇರಿದ ಅನೇಕ ಔಷಧಗಳ ತಯಾರಕರಿಗೆ ಬೆಲೆ ಏರಿಸಲು ಅರ್ಜಿ ಸಲ್ಲಿಸುವ ಅವಕಾಶವನ್ನೂ ಕೊಡಲಾಗಿದೆ.

4. 1 ಮತ್ತು 2ನೇ ಗಣದ ಔಷಧ ತಯಾರಿಕೆಯಲ್ಲಿ ಹೆಚ್ಚಾಗಿ ತೊಡಗಿರುವ ಭಾರತೀಯ ಮೂಲದ ಸಣ್ಣ ಮತ್ತು ಮಧ್ಯಮ ದರ್ಜೆಯ ಕಂಪನಿಗಳೇ ಈ ಔಷಧ ಬೆಲೆ ನಿಯಂತ್ರಣ ಆಜ್ಞೆಗೆ ಬಲಿಯಾಗುವಿವೆ. 1 ಮತ್ತು 2ನೇ ಗಣದ ಕೆಲವೇ ಔಷಧಗಳನ್ನು ತಯಾರಿಸುತ್ತಿರುವ ಬಹು ರಾಷ್ಟ್ರವ್ಯಾಪಿ ಕಂಪನಿಗಳು ಮತ್ತು ಭಾರತೀಯ ದೊಡ್ಡ ಕಂಪನಿಗಳು ಇವುಗಳ ಬೆಲೆಯನ್ನು ಮುಂದೆಂದಾದರೂ ಇಳಿಸಿದಲ್ಲಿ ಇವುಗಳನ್ನು ಕೈಬಿಟ್ಟು ಆಗುವ ನಷ್ಟವನ್ನು 3 ಮತ್ತು 4ನೇ ಗಣದ ಔಷಧಗಳ ತಯಾರಿಕೆಯಿಂದಲೇ ಸುಲಭವಾಗಿ ತುಂಬಿಕೊಳ್ಳುವುವು.

5. ಬಹು ರಾಷ್ಟ್ರವ್ಯಾಪಿ ಮತ್ತು ಕೆಲವು ಭಾರತೀಯ ದೊಡ್ಡ ಕಂಪನಿಗಳು ಔಷಧ ಬೆಲೆ ನಿಯಂತ್ರಣ ಆಜ್ಞೆಗಳು ಇದ್ದಾಗ್ಯೂ ವರ್ಷಂಪ್ರತಿ ತಮ್ಮ ಲಾಭಗಳನ್ನು ಹೆಚ್ಚಿಸಿಕೊಳ್ಳುತ್ತಲಿದ್ದು 3 ಮತ್ತು 4ನೇ ಗಣದ ಔಷಧಗಳ ಮೇಲೆ ಕೇಂದ್ರೀಕೃತವಾಗುತ್ತಿದ್ದಾರೆ ಮತ್ತು ಮುಂದೆಯೂ ಕೇಂದ್ರೀಕೃತವಾಗುತ್ತಾ ಹೋಗಿ 1 ಮತ್ತು 2ನೇ ಗಣದ ಔಷಧಗಳ ತಯಾರಿಕೆಯನ್ನು ಸಂತೋಷವಾಗಿಯೇ ಕೈಬಿಡುವುವು.

6. ಕೇಂದ್ರ ಸರ್ಕಾರದ ಹಣದುಬ್ಬರದ ನೀತಿಯಿಂದಾಗಿ ಕಚ್ಚಾ ವಸ್ತುಗಳ ಮತ್ತು ಭಾಂಗಿ ಮಾಡುವ ವಸ್ತುಗಳ ಬೆಲೆಗಳು ದಿನೇದಿನೇ ಏರುತ್ತಲೇ ಇರುವುದರಿಂದ ಅಂತಿಮವಾಗಿ 1 ಮತ್ತು 2ನೇ ಗಣಗಳ ಔಷಧಿಗಳ ಬೆಲೆಗಳೂ ಏರಿಯೇ ತೀರುವುವು.

7. ಬಹು ರಾಷ್ಟ್ರವ್ಯಾಪಿ ಮತ್ತು ಭಾರತೀಯ ದೊಡ್ಡ ಕಂಪನಿಗಳು ಲಾಭ ಸಂಪಾದಿಸುವುದು ಪೆನ್ಸಿಲಿನ್ ಅಥವಾ ಸ್ಟ್ರೆಪ್ಟೋಮೈಸಿನ್‌ಗಳಂಥ ಜೀವ ಉಳಿಸುವ ಔಷಧಗಳನ್ನು ಮಾರುವುದರಿಂದಲ್ಲ, ಬದಲಾಗಿ 3 ಮತ್ತು 4ನೇ ಗಣಗಳಿಗೆ ಸೇರಿದವಾದ ಆಂಟಿಹೈಪರ್ ಟೆನ್ಸಿವ್, ಓರಲ್ ಡಿಯೋರೆಟಿಕ್ಸ್, ಹಾರ್ಮೋನ್ಸ್, ಟ್ರಾಂಕ್ವಿಲೆಸರ್ಸ್, ಆಂಟಿ-ಡಿಪ್ರೆಸೆಂಟ್ ಮುಂತಾದ ಔಷಧಗಳನ್ನು ಮಾರುವುದರಿಂದ ಲಾಭ ಸಂಪಾದಿಸುವುವು. ಆದ್ದರಿಂದಲೇ ಈ ಔಷಧ ಬೆಲೆ ನಿಯಂತ್ರಣ ಆಜ್ಞೆಯು ಅವರಿಗೇನೂ ತೊಂದರೆಮಾಡುವುದಿಲ್ಲ. ಇದು ಹೀಗಿರುವಾಗ ಇನ್ನೊಂದು ಕಡೆ 1 ಮತ್ತು 2ನೇ ಗಣಗಳಿಗೆ ಸೇರಿದ ಔಷಧಗಳ ತಯಾರಿಕೆಯನ್ನು ಮಾತ್ರ ಅವಲಂಭಿಸಿರುವ ಐ.ಡಿ.ಪಿ.ಎಲ್. ಸಹ ಸೇರಿಕೊಂಡು ಭಾರತೀಯ ವಿಭಾಗದ ಕಂಪನಿಗಳು 3 ಮತ್ತು 4ನೇ ಗಣಕ್ಕೆ ವಿಸ್ತರಿಸಿಕೊಳ್ಳಲು ತಮ್ಮ ಮಿತ ಸಾಮರ್ಥ್ಯದ ಕಾರಣದಿಂದಾಗಿ ಅವು ಇದ್ದ ಸ್ಥಿತಿಯಲ್ಲೇ ಕೊಳೆಯುತ್ತಿರಬೇಕಾಗುವುದು.

[8ನೇ ಪುಟ ನೋಡಿ]

.......ಪ್ರತಿಗಾಮಿ ಚಟುವಟಿಕೆ

[ಒಂದನೇ ಪುಟದಿಂದ]

ಇವೆಲ್ಲ ಇದ್ದರೂ ಕೂಡ ವಾಮರಂಗದ ಸಾವಿರಾರು ದೃಢ ಬೆಂಬಲಿಗರು ಮೆರವಣಿಗೆಯಲ್ಲಿ ನಡೆದು ಸಭೆಯನ್ನು ಸೇರಿದರು. ನಿರ್ಧರಿಸಿದ್ದ ಹಾಗೆ ಸಭೆ ನಡೆದು, ಯೋಜಿಸಿದ್ದ ಹಾಗೆ ವಾಮರಂಗದ ಐದು ಜನ ಸಚಿವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

. ಸಭೆ ತುಂಬಾ ಚೆನ್ನಾಗಿ ನಡೆದದ್ದು ಅಮ್ರಬಂಗಾಲಿಗಳ ಕೋಪವನ್ನು ಇನ್ನಷ್ಟು ಕೆರಳಿಸಿತು. ಸರಿರಾತ್ರಿಯಲ್ಲಿ ಅವರು ಒಂದು ಕುಟುಂಬದ ಸದಸ್ಯರೆಲ್ಲರನ್ನೂ ಕೊಲೆ ಮಾಡಿದರು. ತಕ್ಷಣವೇ, ಬುಡಕಟ್ಟು ಅಲ್ಪಸಂಖ್ಯಾತರ ವಿರುದ್ಧದ ದಂಗೆಯಾಗಿ ಅವರ ಆಕ್ರಮಣಗಳು ಮಾರ್ಪಟ್ಟವು. ಅಲ್ಪಸಂಖ್ಯಾತವರ್ಗಕ್ಕೆ ಸೇರಿದ ಜನರ ಮೇಲೆ ದಾಳಿ ನಡೆಸಿ, ಅವರ ಐವತ್ತು ಮನೆಗಳನ್ನೂ ಸುಡಲಾಯಿತು. 400 ಕುಟುಂಬಗಳು ತೆಲಿಯಮುರಾದಲ್ಲಿ ಆಶ್ರಯ ಪಡೆದುಕೊಳ್ಳಬೇಕಾಯಿತು.

ವಾಮರಂಗ ಸರ್ಕಾರ ಮತ್ತು ವಾಮರಂಗದ ಕಾರ್ಯಕರ್ತರು ತುಂಬ ಎಚ್ಚರಿಕೆಯಿಂದ ಇದ್ದು, 24 ಗಂಟೆಗಳೊಳಗೆ ಪರಿಸ್ಥಿತಿಯನ್ನು ಹತೋಟಿಗೆ ತಂದರು. ಆ ಪ್ರದೇಶದ ಜನತೆಗೆ ಭರವಸೆ ಕೊಡಲು, ಪೋಲೀಸ್ ಠಾಣೆಗಳನ್ನು ಅಲ್ಲಿ ತೆರೆಯಲಾಯಿತು.

ಆಕ್ರಮಣಕ್ಕೊಳಗಾದ ಪ್ರದೇಶದಲ್ಲಿ ಕಾವಲು ಕಾಯಲು ಮತ್ತು ಭಯಪೀಡಿತ ಜನರಲ್ಲಿ ಭರವಸೆ ಹುಟ್ಟಿಸಲು, ಸರ್ವಪಕ್ಷೀಯ ಶಾಂತಿ ಸಮಿತಿಯೊಂದನ್ನು ರಚಿಸಲು ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿ ಅವರು ತಕ್ಷಣವೇ ಎಲ್ಲ ಪಕ್ಷಗಳ ಸಭೆಯೊಂದನ್ನು ಕರೆದಿದ್ದರು.

ಸಭೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಆರ್. ಎಸ್. ಪಿ., ಫಾರ್ವರ್ಡ್ ಬ್ಲಾಕ್, ಕಮ್ಯುನಿಸ್ಟ್ ಪಕ್ಷ, ತ್ರಿಪುರಾ ಉಪಜಾತಿ ಯುವ ಸಮಿತಿ ಮತ್ತು ಸಿ.ಎಫ್.ಡಿ.ಯ ಪ್ರತಿನಿಧಿಗಳು ಭಾಗವಹಿಸಿದ್ದರು. ಹದಿನೈದು ಮಂದಿ ಸದಸ್ಯರನ್ನುಳ್ಳ ಶಾಂತಿಸಮಿತಿಯನ್ನು ಸಭೆಯಲ್ಲಿ ರಚಿಸಲಾಯಿತು.

ಸಮಿತಿಯು ಜೂನ್ 12ರಂದು ದಾಳಿಪೀಡಿತ ಪ್ರದೇಶಕ್ಕೆ ಭೇಟಿಕೊಟ್ಟು, ಜನರ ಗುಂಪುಗಳೊಂದಿಗೆ ಮಾತನಾಡಿ, ಸುಳ್ಳು ಸುದ್ದಿಗಳಿಂದ ಮೋಸಹೋಗಬೇಡಿರೆಂದು ಅವರಿಗೆ ಉಪದೇಶಿಸಿತು. ಅಪರಾಧಿಗಳು ಮತ್ತು ತೊಂದರೆ ಮಾಡುವವರನ್ನು ಬಂಧಿಸುವುದರಲ್ಲಿ ಪೋಲೀಸರಿಗೆ ಸಹಕಾರ ನೀಡಬೇಕೆಂದು ಅವರಲ್ಲಿ ಮನವಿ ಮಾಡಲಾಯಿತು. ದಾಳಿಗೆ ಬಲಿಯಾದವರಿಗೆ ನೀಡಲಾಗುವ ಪರಿಹಾರದ ಸಿದ್ಧತೆಗಳನ್ನೂ ಸಮಿತಿಯ ಸದಸ್ಯರು ಹೋಗಿ ಪರಿಶೀಲಿಸಿದರು.

ಮುಖ್ಯಮಂತ್ರಿಗಳು ಕರೆದಿದ್ದ ಸಭೆಯಲ್ಲಿ ಭಾಗವಹಿಸಲು ಕಾಂಗ್ರೆಸ್, ಕಾಂಗ್ರೆಸ್ (ಐ) ಮತ್ತು ಜನತಾಪಕ್ಷಗಳು ನಿರಾಕರಿಸಿದವು. ಅವರು ಪ್ರತ್ಯೇಕ ಸಭೆ ನಡೆಸಿ, ಉತ್ತೇಜಕ ಹೇಳಿಕೆಗಳನ್ನಿತ್ತರು. ಪ್ರಧಾನಮಂತ್ರಿ ಮತ್ತು ರಾಷ್ಟ್ರಾಧ್ಯಕ್ಷರಿಗೆ ತಂತಿ ಕಳುಹಿಸಿದರು.

ನಂತರ, ಕಾಂಗ್ರೆಸ್ (ಐ), ಕಾಂಗ್ರೆಸ್ ಇವುಗಳು, ಶಾಂತಿ ಸಮಿತಿಯಲ್ಲಿದ್ದ ಸಿ. ಎಫ್. ಡಿ. ಯೊಂದಿಗೂ ಸೇರಿ, ವಾಮರಂಗ ಸರ್ಕಾರದ ವಿರುದ್ಧ ಹೋರಾಡಲು ಮತ್ತು ಸ್ವಾಯತ್ತ ಜಿಲ್ಲಾ ಸಮಿತಿ ಮಸೂದೆಯನ್ನು ವಿರೋಧಿಸಲು "ರಾಷ್ಟ್ರೀಯ ರಂಗ"ವೊಂದನ್ನು ಸ್ಥಾಪಿಸಿವೆಯೆಂದು ಪತ್ರಿಕೆಗಳು ವರದಿಮಾಡಿದ್ದವು. ಜನತಾ ಪಕ್ಷದ ಸ್ಥಳೀಯ ಘಟಕವೂ ಮಸೂದೆಯನ್ನು ವಿರೋಧಿಸಿ ಹೇಳಿಕೆಯನ್ನಿತ್ತಿದೆ. ತೆಲಿಯಮುರಾ ಘಟನೆಗಳವರೆಗೆ ಇವು ಯಾವುವೂ ಬಹಿರಂಗವಾಗಿ ಮಸೂದೆಯನ್ನು ವಿರೋಧಿಸಿರಲಿಲ್ಲ.

ತೆಲಿಯಮುರಾದಲ್ಲಿ ಮಾತ್ರವೇ ಅಂಥ ಘಟನೆ ನಡೆದಿಲ್ಲ. ಇದು, ಒಳಗಿರುವ ಪ್ರತಿಗಾಮಿಗಳು, ಚರ್ಚ್ ಮುಂತಾದ ಹೊರಗಿನ ಪ್ರತಿಗಾಮಿಗಳ ಜೊತೆ ಸೇರಿಕೊಂಡು ವಾಮರಂಗ ಸರ್ಕಾರವನ್ನು ವಿರೋಧಿಸುವುದಕ್ಕಷ್ಟೇ ಅಲ್ಲದೆ, ಇಡೀ ಈಶಾನ್ಯ ಭಾರತದಲ್ಲಿ ಅಸ್ಥಿರತೆಯನ್ನುಂಟುಮಾಡಲು ನಡೆಸುತ್ತಿರುವ ಪಿತೂರಿಯ ಒಂದು ಭಾಗವಾಗಿದೆ.

●

ಸಂಪಾದಕೀಯ

[ಒಂದನೇ ಪುಟದಿಂದ]

ದೇವರಾಜ ಅರಸು ಮತ್ತು ಅವರ ಕರ್ನಾಟಕ ಕಾಂಗ್ರೆಸ್ಸಿಗರು ಒಂದು ವಿಚಾರವನ್ನಂತೂ ತಿಳಿದಿರಬೇಕು (ಸ್ವಲ್ಪ ತಿಳಿದಂತೆ ಅವರ ಹೇಳಿಕೆಗಳಿಂದ ಕಂಡುಬರುತ್ತದೆ). ಇಂದಿರಾಗಾಂಧಿಯ ಭಾವಚಿತ್ರವನ್ನು ಮೆರವಣಿಗೆ ಮಾಡಿ. ಏನೂ ಅರಿಯದ ಮುಗ್ಧ ಜನತೆಯಲ್ಲಿ ಇಂದಿರಾಳ ಬಗ್ಗೆ ಮೂಡಿಸಿದ ಅಭಿಪ್ರಾಯವನ್ನು ಹೊಡೆದೋಡಿಸಬೇಕಾದರೆ ದೇವರಾಜ ಅರಸು ಅವರ ಸರಕಾರವು ಶ್ರಮಜೀವಿಗಳಿಗೆ, ಜನತೆಗೆ ನ್ಯಾಯ ದೊರಕಿಸಿಕೊಡುವುದರಲ್ಲಿ ಮುಂದಾಗಬೇಕು. ಈ ಹಿಂದಿನಂತೆ ಕಾರ್ಮಿಕರ ಮುಷ್ಕರ ಸಂದರ್ಭದಲ್ಲಿ ಕಾರ್ಮಿಕರ ವಿರೋಧ ನಿಲುಮೆಯನ್ನು ತಳೆಯುವುದು, ಹಳ್ಳಿಯ ಬಡವರ ಮೇಲೆ ದಂಡಪ್ರಯೋಗ ಮಾಡುವುದು ಇವೆಲ್ಲವುಗಳನ್ನು ನಿಲ್ಲಿಸಿ ಜನತೆಗೆ ಪ್ರಜಾಪ್ರಭುತ್ವ ಹಕ್ಕುಗಳನ್ನು ಕೊಡುವುದಕ್ಕೆ ಮುಂದಾಗಬೇಕು. ಇಂದಿರಾ ಸರ್ವಾಧಿಕಾರದ ವಿರುದ್ಧ ನಡೆದ ಬಂಡು ಅರ್ಥಪೂರ್ಣವಾಗಬೇಕಾದರೆ, ರಾಜ್ಯದಲ್ಲಿ ಪ್ರಜಾಪ್ರಭುತ್ವ ಹಕ್ಕುಗಳಿಗೆ ಹೆಚ್ಚಿನ ಮಾನ್ಯತೆ ದೊರೆಯುವಂತಾಗಬೇಕು.

●

ಔಷಧ ಬೆಲೆ ನಿಯಂತ್ರಣ.......

[7ನೇ ಪುಟದಿಂದ]

8. ಆದ್ದರಿಂದ ಈ ಔಷಧ ಬೆಲೆ ನಿಯಂತ್ರಣ ಆಜ್ಞೆಯು ತಮ್ಮ ಲಾಭಗಳಿಗಾಗಿ 3 ಮತ್ತು 4ನೇ ಗಣ ವಲಯವನ್ನು ಬಳಸಾಡುವ ಸಾಧನವುಳ್ಳ ಬಹುರಾಷ್ಟ್ರವ್ಯಾಪಿ ಮತ್ತು ದೊಡ್ಡವಾಗಿರುವ ಭಾರತೀಯ ಕಂಪನಿಗಳ ಹಿತಗಳನ್ನು ರಕ್ಷಿಸಿದೆ. ಮತ್ತು ಹಾಗೆಯೇ ಯಾವುದೇ ಉತ್ಪನ್ನಗಳ ಬೆಲೆಗಳನ್ನು ಇಳಿಸದೆಯೇ ಸಣ್ಣ ಮತ್ತು ಮಧ್ಯಮ ಗುಂಪಿನ ಕಂಪನಿಗಳನ್ನು ಪೇಚಿಗೆ ಸಿಕ್ಕಿಸುವುದಾಗಿದೆ. ಇವೆಲ್ಲದರ ಪರಿಣಾಮವಾಗಿ ಐ. ಡಿ. ಪಿ. ಎಲ್. ಮತ್ತು ಸಾರ್ವಜನಿಕ ವಿಭಾಗದ ಘಟಕಗಳು ಕೊರತೆ ಬೀಳುವುದನ್ನು ತುಂಬಲು ಜನರ ಹಿತಕ್ಕಾಗಿ ಮುಂಬರದೇ ಹೋದರೆ ಕೆಲವು ಸಾಮಾನ್ಯ ಔಷಧಗಳೂ ಸಹ ದೊರಕದೇ ಹೋಗಬಹುದು.

9. ಬಹು ರಾಷ್ಟ್ರವ್ಯಾಪಿ ಮತ್ತು ದೇಶೀಯ ಖಧೀಮ ಔಷಧಿ ಧಣಿಗಳಿಂದಾಗುವ ತೊಂದರೆಯನ್ನು ತಪ್ಪಿಸುವುದಕ್ಕಾಗಿ ಅಗತ್ಯ ಮತ್ತು ಜೀವ ಉಳಿಸುವ ಔಷಧಗಳ ತಯಾರಿಕೆಗಾಗಿ ಪ್ರೋತ್ಸಾಹ ಧನ ಈಗಾಗಲೇ ಇರಬೇಕಾಗಿತ್ತು. ಈ ಸಂಬಂಧದಲ್ಲಿ ಸಾರ್ವಜನಿಕ ವಿಭಾಗವು ಮುಖ್ಯ ಪಾತ್ರ ನಿರ್ವಹಿಸಬೇಕು.

10, ಔಷಧಗಳ ಬೆಲೆಗಳನ್ನು ಸರ್ಕಾರವು ಗೊತ್ತುಮಾಡಿದೆ. ಆದರೆ ಅದು ಸಗಟು ಔಷಧಗಳ, ಮಾಧ್ಯಮಗಳ ಮತ್ತು ಬೆಲೆ ಹೆಚ್ಚಿಸುವಂಥ ವಿಷಯಗಳ, ಅಂದರೆ, ತಯಾರಿಕೆಯಿಂದ ಬಳಕೆಗೆ ಬರುವ ವರೆಗಿನ ನಾನಾ ವಿಷಯವಿಧಾನಗಳ ಬೆಲೆಯನ್ನು ಗೊತ್ತುಮಾಡಿಲ್ಲ. ಈ ಒಂದು ದೋಷದಿಂದಾಗಿ ಈ ನೀತಿಯು ವಿಫಲವಾಗಿಯೇ ತೀರುವುದು.

11. ಅಗ್ಗದ ಔಷಧಗಳೆಂದು ಕಳೆದ ವರ್ಷ 22 ಐಟಂ ಸಗಟು ಔಷಧ ಮತ್ತು ಮಾಧ್ಯಮಗಳ ಮೇಲಿನ ಕಸ್ಟಂಸ್ ಸುಂಕವನ್ನು ರದ್ದುಪಡಿಸಿ, ಇನ್ನು ಕೆಲವು ಮುಖ್ಯ ಐಟಂಗಳ ಮೇಲೆ ಅವುಗಳ ಬೆಲೆಯನುಸರಿಸಿ 75% ರಿಂದ 25%ಕ್ಕೆ ಕಸ್ಟಂಸ್ ಸುಂಕವನ್ನು ಇಳಿಸಿ, ಎಕ್ಸೈಸ್ ಸುಂಕದಲ್ಲಿಯ 5% ಇಳಿಸಿದ ನಂತರವೂ ಸಹ ಸರ್ಕಾರವು ಸಾಕಷ್ಟು ಸಹಾಯಧನದೊಂದಿಗೆ ಮುಂದೆ ಬಂದ ಪಿನಃ ಒಟ್ಟಾರೆ ಬೆಲೆ ಏರಿಕೆಯನ್ನು ತಡೆಯಲಾಗದಾಗಿದೆ. ಗಾಜಿನ ಸೀಸೆಗಳು, ಕಾಗದ, ಮುದ್ರಣ, ಅಲ್ಯೂಮಿನಿಯಂ ಹಾಳೆಗಳು, ಸಾರಿಗೆ, ಇತ್ಯಾದಿ ಹೂಡಿಕೆಯಲ್ಲಿ ಒಳಪಡುವ ವೆಲ್ಲವುಗಳ ಬೆಲೆಗಳು ವಿಪರೀತವಾಗಿ ಏರಿವೆ.

●

: ಸೂಚನೆ :

ಬೀದಿಬದಿವಾಸಿಗಳ ಮುಂದುವರಿದ ಹೋರಾಟ-2ನೇ ಪುಟದಿಂದ (7ನೇ ಪುಟದಲ್ಲಿ) ಎಂದು ತಪ್ಪಾಗಿ ಅಚ್ಚಾಗಿದೆ. ಅದನ್ನು ಶ್ರೀನಿವಾಸಪುರದಲ್ಲಿ ರೈತರ ಸತ್ಯಾಗ್ರಹ ಎಂದು ಓದಿಕೊಳ್ಳಿ.

ಆದಾಯ-ಜಾತಿ ಸರ್ಟಿಫಿಕೇಟ್‌ಗಳಿಗಾಗಿ ಬವಣೆ

ರಾಯಚೂರು ಎಸ್.ಎಫ್.ಐ. ಪ್ರತಿಭಟನೆ

ಪ್ರತಿ ವರ್ಷ ವಿದ್ಯಾರ್ಥಿಗಳು ಆದಾಯ ಮತ್ತು ಜಾತಿ ಸರ್ಟಿಫಿಕೇಟ್‌ಗಳಿಗಾಗಿ ತಹಶೀಲ್ದಾರ್‌ರವರ ಕಛೇರಿಗೆ ತಿರುಗುವುದು, ಸ್ಟಾಂಪ್ ಡ್ಯೂಟಿ ಮತ್ತು ಮಧ್ಯವರ್ತಿಗಳಿಗೆ ಬಕ್ಷೀಸು ಇತ್ಯಾದಿಯಾಗಿ ಹತ್ತಾರು ರೂಪಾಯಿಗಳನ್ನು ತೆರಬೇಕಾಗಿರುವುದು ಇಂದು ಸರ್ವೇಸಾಮಾನ್ಯ ವಿಷಯವಾಗಿದೆ. ಈ ಬಗ್ಗೆ ಸರ್ಕಾರದ ಗಮನ ಸೆಳೆಯಲು ಸ್ಟಾಂಪ್ ಡ್ಯೂಟಿ ರದ್ದುಪಡಿಸುವಂತೆ ಮತ್ತು ಪ್ರತಿವರ್ಷವೂ ಸರ್ಟಿಫಿಕೇಟ್ ಪಡೆಯಬೇಕು ಎಂಬ ನಿಲುವನ್ನು ವಿರೋಧಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ ರಾಯಚೂರು ಘಟಕವು ಜೂನ್ 18 ರಂದು ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಯವರಿಗೆ ಮನವಿ ಅರ್ಪಿಸಿತು. ಸಮಸ್ಯೆಯನ್ನು ಕೂಡಲೆ ನಿವಾರಿಸದಿದ್ದಲ್ಲಿ ಜುಲೈ ತಿಂಗಳಲ್ಲಿ ಕಾಲೇಜು ವಿದ್ಯಾರ್ಥಿಗಳನ್ನು ಸಂಘಟಿಸಿ ಶಕ್ತಿಯುತ ಹೋರಾಟ ನಡೆಸಲು ಯೋಜನೆ ಹಾಕಿದ್ದಾರೆಂದು ಖಜಾಂಚಿ ಕಾಂ. ಜಿ. ರಮೇಶ್ ವರದಿ ಮಾಡಿದ್ದಾರೆ.

○

ಶ್ರದ್ಧಾಂಜಲಿ

ಕಾಂ. ಸಿ. ವಿ. ನಾರಾಯಣಸ್ವಾಮಿಯ ದೊಡ್ಡಪ್ಪನವರಾದ ಶ್ರೀ ಸಿ.ಬಿ. ವೆಂಕಟರಾಯಪ್ಪನವರು ತಾ. 23.6.79 ರಂದು ತಮ್ಮ 55ನೇ ವಯಸ್ಸಿನಲ್ಲಿ ನಿಧನರಾದರು. ಇವರು 1953 ರಿಂದ ಕಮ್ಯುನಿಸ್ಟ್ ಪಕ್ಷದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, 1964ರ ಪಾರ್ಟಿ ವಿಭಜನೆಯ ನಂತರ, ಸಿ.ಪಿ.ಐ.(ಎಂ)ನ ಹಿತೈಷಿಗಳಾಗಿದ್ದರು. ಇವರು ಚಿಂತಾಮಣಿ ತಾಲ್ಲೂಕು ಮುನಗನಹಳ್ಳಿಗೆ ಸೇರಿದವರು. ಇವರ ನಿಧನಕ್ಕೆ ಐಕ್ಯರಂಗ ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಪರಿಸರ

"ಜನಸಾಮಾನ್ಯರ ಮನದಿಂದ ಆಕೆಯನ್ನು ಬೇರು ಸಹಿತ ಕಿತ್ತುಹಾಕಿ. ಶ್ರೀಮತಿ ಇಂದಿರಾಗಾಂಧಿ ರಾಜ್ಯದಲ್ಲಿ ಪ್ರವಾಸ ಮಾಡುವ ಮುನ್ನ ಈ ಕಾರ್ಯ ಮೊದಲು ಆಗಬೇಕು."

— ಡಿ. ಎಂ. ಸಿದ್ದಯ್ಯ
(ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಕಾಂಗ್ರೆಸ್)

ಪ್ರಸ್ತುತ ಕರ್ನಾಟಕದ ರಾಜಕೀಯ ಬೆಳವಣಿಗೆಯಿಂದ ಜನತಾ ಪಕ್ಷಕ್ಕೆ ಹಾನಿಯಿದೆ.

— ಓರ್ವ ಜನತಾ ಪಕ್ಷದ ಪ್ರಮುಖ ಸದಸ್ಯ
(ಮೈಸೂರು)

ಶ್ರೀಮತಿ ಇಂದಿರಾಗಾಂಧಿಯವರಿಗೆ ತಮ್ಮ ಅಥವಾ ಪಕ್ಷದ ಉಳಿವಿಗಿಂತ ಮಗನ ರಾಜಕೀಯ ಉಳಿವೇ ಪ್ರಧಾನವಾಗಿದೆ.

— ಎನ್. ಕೆ. ತಿರ್ಪುಡೆ
(ಮಹಾರಾಷ್ಟ್ರದ ಕಾಂಗ್ರೆಸ್ ನಾಯಕ)

ಇಂದಿರಾಗಾಂಧಿಯವರು ಪಕ್ಷವನ್ನು ಸ್ವಾರ್ಥಕ್ಕೆ ಬಳಸಿಕೊಳ್ಳಲು ಯತ್ನಿಸಿದ್ದರಿಂದಲೇ ನಾವು ಅವರಿಂದ ದೂರ ಸರಿಯಬೇಕಾಯಿತು.

— ದೇವರಾಜ ಅರಸು

ಮುಂದಿನ ಬಾರಿ ನಡೆಯುವ ಚುನಾವಣೆಯಲ್ಲಿ ಆ ವ್ಯಕ್ತಿಯನ್ನು (ಇಂದಿರಾ) ಬಿಟ್ಟು ನಾವು ಸ್ಪರ್ಧಿಸಬೇಕಾಗಿದೆ – ನಿಮ್ಮ ಕ್ಷೇತ್ರಗಳಿಗೆ ಸೇವೆ ಸಲ್ಲಿಸಿ.

— ದೇವರಾಜ ಅರಸು
(ಶಾಸಕಾಂಗ ಸಭೆಯಲ್ಲಿ)

ಕರ್ನಾಟಕದಲ್ಲಿ "ಕಾಂಗ್ರೆ" ಪಕ್ಷಕ್ಕೆ ಮುಖ್ಯ ಮಂತ್ರಿ ದೇವರಾಜ ಅರಸು ಬಗೆದ "ದ್ರೋಹ"ಕ್ಕೆ ತಮ್ಮ ಪೂರ್ಣ ಶಕ್ತಿಯನ್ನು ಬಳಸಿ ಪ್ರತಿಕಾರ ಮಾಡಲಾಗುವುದು.

— ಸಿ. ಎಂ. ಸ್ಟೀಫನ್
(ಲೋಕಸಭೆಯ ವಿರೋಧಪಕ್ಷದ ನಾಯಕ)

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154